| 4 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 51 | 21 | 21 | 9 |
| 5 | ನಗರಾಭಿವೃದ್ಧಿ ಇಲಾಖೆ | 31 | 24 | 2 | 5 |
| 6 | ವಾಣಿಜ್ಯ ತೆರಿಗೆ ಇಲಾಖೆ | 5 | 2 | 3 | 0 |
| 7 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 1 | 0 | 0 | 1 |
| 8 | ಶಿಕ್ಷಣ ಇಲಾಖೆ | 21 | 3 | 15 | 3 |
| 9 | ಸಾರಿಗೆ ಇಲಾಖೆ | 3 | 1 | 1 | 1 |
| ಒಟ್ಟು: | 0 | 703 | 301 | 280 | 122 |

**ಪರಿಹಾರ ಧನ**: ಈವರೆಗೆ ಒಟ್ಟು 343 ವಿಳಂಬ ಪ್ರಕರಣಗಳಿಗೆ ಪರಿಹಾರ ಧನವನ್ನು ನೀಡಲಾಗಿದೆ, ಇಲಾಖಾವಾರು ಪರಿಹಾರ ಧನ ನೀಡಿದ ಪಟ್ಟಿ ಈ ಕೆಳಕಂಡಂತೆ ಇದೆ.

| ಇಲಾಖೆ | ಪರಿಹಾರ ಧನ ಪಡೆದವರ ಸಂಖ್ಯೆ |
|---|---|
| ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1 |
| ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ | 12 |
| ನಗರಸಭೆ | 1 |
| ವಾಣಿಜ್ಯ ತೆರಿಗೆ ಇಲಾಖೆ | 3 |
| ಸಾರ್ವಜನಿಕ ಶಿಕ್ಷಣ | 12 |
| ಒಳಾಡಳಿತ | 2 |
| ಕಂದಾಯ ಇಲಾಖೆ | 265 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 21 |
| ಸರ್ವೆ ಮತ್ತು ಭೂ ಕಂದಾಯ ಇಲಾಖೆ | 25 |
| ಸಾರಿಗೆ ಇಲಾಖೆ | 1 |
| ಒಟ್ಟು | **343** |

## ಅಧ್ಯಾಯ ೩ಬಿ

## ನಾಗರಿಕರ ಮರುಸ್ಪಂದನ

**TR0240000042386**
**ಮಂಜುನಾಥ್ ಪಾಟಿಲ್,**
**ಬೈಲ್ ಹೊಂಗಲ್,**

"ವಾಹನ ಚಾಲನಾ ಪರವಾನಿಗೆಗಾಗಿ ಆರ್ ಟಿ ಒ ನಲ್ಲಿ ಅರ್ಜಿ ಹಾಕಿದ್ದೆ, ಕೋರಿದ ಸೇವೆ ಸಿದ್ಧವಿದೆಯೆಂದು ತಿಳಿಯಿತು, ಇನ್ನೂ ನಾನು ಕಛೇರಿಗೆ ಹೋಗಿ ಪರವಾನಿಗೆಯನ್ನು ತೆಗೆದುಕೊಳ್ಳಬೇಕಿದೆ. ಸಕಾಲದಿಂದ ಸರಕಾರಿ ಸೇವೆಗಳನ್ನು ಪಡೆದುಕೊಳ್ಳುವ ವಿಧಾನ ಸುಲಭವಾಗಿರುವುದು ನಾಗರಿಕರಿಗೆ ಸಂತಸವನ್ನು ಉಂಟು ಮಾಡಿರುವುದಕ್ಕೆ ಸಕಾಲ ಮಿಷನ್‌ಗೆ ಧನ್ಯವಾದಗಳು, 'ಸರಕಾರದಿಂದ ಕಾಲಮಿತಿಯಲ್ಲಿ ಸಾರ್ವಜನಿಕರಿಗೆ ಸೇವೆ ' ಈ ನಿಟ್ಟಿನಲ್ಲಿ ಸರಕಾರದ ಹೆಜ್ಜೆಗೆ ಅಭಿನಂದನೆಗಳು"

**ED0990000072942,**
**ಶ್ರೀಮತಿ ಎಂ ಜಿ ದಲಾಯತ್,**
**ಗದಗ ಗ್ರಾಮೀಣಾ ಭಾಗದಿಂದ,**

ಸಿಬ್ಬಂದಿ ಮತ್ತು ಆಡಳಿತ ಸುದಾರಣೆಯ ಸೇವೆ, "ವಾಹನ /ಜಿಪಿಎಫ್/ಕೆಜಿಐಡಿ/ಕಂಪ್ಯೂಟರ್ ಹಾಗು ಇತರೆ ಖರೀದಿಗೆ ಮುಂಗಡ ಮಂಜೂರಾತಿಗಾಗಿ ಕೋರಿದ್ದೆ, ನಿಗದಿತ ಕಾಲಮಿತಿಯಲ್ಲಿ ಸೇವೆ ದೊರಕಿತು ಇದಲ್ಲದೆ ಸೇವೆ ಸಿದ್ಧವಿದೆ ಎಂಬ ಬಗ್ಗೆ ಮೊಬೈಲ್ ನಲ್ಲಿ ಎಸ್ ಎಂ ಎಸ್ ಸಂದೇಶ ಬರುವ ಹೊಸತನವು ನನ್ನನ್ನು ಚಕಿತಗೊಳಿಸಿತು. ಈ ಮೊದಲು ಇಂತಹ ಸೇವೆಗಳನ್ನು ಪಡೆಯಲು ಬಹಳ ಸಮಯ ತೆಗೆದುಕೊಳ್ಳಲಾಗುತ್ತಿತ್ತು, ಕಛೇರಿಗಳಿಗೆ ಅಲೆದಾಡಿ ಸಾಕಾಗುತ್ತಿತ್ತು, ಸೇವೆಗಳನ್ನು ಒದಗಿಸಲು ಕಾಲಮಿತಿ ಅಳವಡಿಸಿರುವುದು ಬಹಳ ಉತ್ತಮ ಪದ್ಧತಿಯಾಗಿದೆ"

**ದೇವರಾಜು.**

**ಕೆ.ಆರ್ ಪೇಟ್, ಮಂಡ್ಯ,**

**ಕಂದಾಯ ಇಲಾಖೆಯ ಸೇವೆಗಾಗಿ ನಾಗರಿಕರು ಕೋರಿದ್ದರು,**

"ಸಕಾಲದ ಬಗ್ಗೆ ನನಗೆ ಪತ್ರಿಕೆಗಳಿಂದ ತಿಳಿದು ಬಂತು, ಖಾತೆ ಬದಲಾವಣೆಗಾಗಿ ಕೋರಿದ್ದೆ ಸುಲಭವಾಗಿ ಕಾಲಮಿತಿಯಲ್ಲಿ ದೊರಕಿತು, ಸಕಾಲ ಅಧಿನಿಯಮ ನಾಗರಿಕರ ಮುಖದಲ್ಲಿ ನಗು ತಂದಿದೆ, ಕೇವಲ ಇದೊಂದೆ ನಿಯಮ ಜನತೆಗೆ ಕಷ್ಟವನ್ನು ಅರಿತು ಕಾರ್ಯನಿರತವಾಗಿದೆ, ನಿಜವಾಗಿಯೂ ಸಕಾಲ ನಾಗರಿಕರಿಗೆ ವರವಾಗಿದೆ, ಈ ಮೊದಲಿಗೆ ಸರಕಾರಿ ಸೇವೆ ಪಡೆಯುವುದು ಹರಸಾಹಸವೆ ಆಗಿತ್ತು, ಈಗ ಸ್ವೀಕೃತಿ ಪತ್ರ ಕೊಡುತ್ತಾರೆ, ಯಾವ ದಿನ ಸೇವೆ ದೊರಕುತ್ತದೆ ತಿಳಿಯುತ್ತದೆ, ಅಲೆದಾಡುವುದು ತಪ್ಪಿ ಹಣ ವ್ಯರ್ಥ ವ್ಯಯವಾಗುವುದು ತಪ್ಪಿದೆ, ಸಮಯ ಉಳಿತಾಯವಾಗುತ್ತಿದೆ, ಲಂಚ ತೆಗೆದುಕೊಳ್ಳುವುದು ಕೊಂಚ ಕಡಿಮೆಯಾಗಿದೆ. ನಿಷ್ಠಾವಂತ ಅಧಿಕಾರಿಗಳನ್ನು ಮಾತ್ರ ನೇಮಿಸಿ, ಒಟ್ಟಾರೆ ಸಕಾಲ ಕಾರ್ಯವೈಖರಿ ಶ್ಲಾಘನೀಯ"

**RD0990000437799,**

**ನಿಂಗಪ್ಪ ತಂ ಮಲ್ಲಪ್ಪ,**

**ಯಾದಗಿರಿ,**

"ಕಂದಾಯ ಇಲಾಖೆಯಿಂದ ಕೃಷಿ ಭೂಮಿ ಪರಿವರ್ತನೆಗಾಗಿ ಕೋರಿದ್ದೆ. ದೊರಕಿತು, ಸಕಾಲದ ಬಗ್ಗೆ ಜಿಲ್ಲಾಧಿಕಾರಿ ಕಛೇರಿಯಿಂದ ತಿಳಿಯಿತು, ಈ ಮೊದಲು ಅರ್ಜಿಯನ್ನು ತಾಲ್ಲೂಕು ಕಛೇರಿಯಲ್ಲಿ ಸಲ್ಲಿಸಬೇಕಿತ್ತು, ಸಕಾಲ ಬಂದು ನಾಗರಿಕರ ಜೀವನವನ್ನು ಸುಲಭಗೊಳಿಸಿದೆ"

**ಬೊಮ್ಮಣ್ಣ,**

ಹಿರೇಕೆರೂರು ಗ್ರಾಮ ಪಂಚಾಯತಿಯಲ್ಲಿ ಕುಡಿಯುವ ನೀರಿನ ನಿರ್ವಹಣೆಗಾಗಿ ಕೋರಿದ್ದರು "ಸೇವೆ ಕಾಲಮಿತಿಯಲ್ಲಿ ದೊರಕಿತು, ಈ ಮೊದಲು ಸರಕಾರಿ ಕಚೇರಿಗಳಲ್ಲಿ ಹಲವಾರು ಪ್ರಕರಣಗಳು ಇದ್ದವು, ಅಧಿಕಾರಿಗಳ ಕರ್ತವ್ಯ ನಿರ್ವಹಣೆ ಉತ್ತಮವಾಗಿರಲಿಲ್ಲಾ, ಸಕಾಲ ಬಂದ ನಂತರ ಸಮಯಬದ್ಧವಾಗಿ ಸೇವೆಗಳನ್ನು ಪಡೆಯಬಹುದಾಗಿರುವುದು ಉತ್ತಮ ಬೆಳವಣಿಗೆಯಾಗಿದೆ."

**ಆರ್ ಜಿ ಬಸವರಾಜ್**

**ಹೊಸದುರ್ಗ**

ಚಿತ್ರದುರ್ಗ ನಗರಸಭೆಯಲ್ಲಿ ಹೊಸ ಕಟ್ಟಡ ಪರವಾನಿಗೆಗಾಗಿ ಕೋರಿದ್ದೆ, ಸರಿಯಾದ ಸಮಯಕ್ಕೆ ಸಿಗಲಿಲ್ಲಾ, ಹಲವಾರು ಬಾರಿ ಕಛೇರಿಗೆ ಸುತ್ತಾಡಿದ್ದೇನೆ, ನನ್ನ ಸ್ನೇಹಿತನೂ ಇದೇ ರೀತಿ ತುಂಬಾ ಬಾರಿ ಕಛೇರಿಗೆ ಅಲೆದಾಡಿದ ನಂತರ ಸೇವೆ ದೊರಕಿತು ಎಂದು ಬೇಸರ ವ್ಯಕ್ತಪಡಿಸಿದರು.

**ಶಿವಣ್ಣ,**
**ಚಿತ್ರದುರ್ಗ,**

ಅಗ್ನಿ ಶಾಮಕ ದಳದ ಸೇವೆಗಾಗಿ (ಬೆಂಕಿ ನಂದಿಸಲು) ಕೋರಿದ್ದರು. "ನಮ್ಮ ಹೊಲಕ್ಕೆ ಬೆಂಕಿ ಬಿದ್ದಿತ್ತು, ದೂರು ಕೊಟ್ಟ ತಕ್ಷಣ ಬಂದು ಬೆಂಕಿ ನಂದಿಸಿದರು, ಬೆಂಕಿಯಿಂದ ತುಂಬಾ ನಷ್ಟವಾಗುವುದನ್ನು ತಪ್ಪಿಸಿದ್ದಾರೆ, ಧನ್ಯವಾದ ಸಕಾಲ"

**ಬಿ ಎಂ ತಿಮ್ಮಣ್ಣ,**
**ಮೊಣಕಾಲ್ಮೂರು,**
**ಚಿತ್ರದುರ್ಗ,**

"ಆಹಾರ ಮತ್ತು ನಾಗರಿಕ ಪೂರೈಕೆ ಸೇವೆಗಾಗಿ ಕೋರಿದ್ದೆ ದೊರಕಿತು. ಸಕಾಲ ಅಳವಡಿಕೆಯಿಂದಾಗಿ ಸರಕಾರಿ ಅಧಿಕಾರಿಗಳು ನಿಗದಿತ ಕಾಲಮಿತಿಯಲ್ಲಿ ಸೇವೆಯನ್ನು ನೀಡುತ್ತಿದ್ದಾರೆ, ಆದರೆ ಇನ್ನಷ್ಟು ಜನ ಜಾಗೃತಿಯ ಅವಶ್ಯಕತೆಯಿದೆ."

**RD0038546011098,**

**ರವಿ ಟಿ, ಹೊನ್ನಾಳ್ಳಿ,**

**ಕಂದಾಯ ಇಲಾಖೆಯ ಸೇವೆಗಾಗಿ ಕೋರಿದ್ದರು,**

"ಡೊಮಿಸಿಲನ್  ಪ್ರಮಾಣ ಪತ್ರಕ್ಕಾಗಿ ಕೋರಿದ್ದೆ. ಪ್ರಸ್ತುತ ಸಕಾಲದಿಂದಾಗಿ ಸರಕಾರಿ ಸೇವೆಗಳ ನಿರ್ವಹಣೆ ಅಂದರೆ ಕಾಲಮಿತಿ ಅನ್ನುವ ಬಗ್ಗೆ ನಾಗರಿಕರಿಗೆ ಗೊತ್ತಿದೆ, ಸರಕಾರಿ ಸೇವೆಗಳ ನಿರ್ವಹಣೆ ಗುಣಮಟ್ಟ ಸ್ವಲ್ಪ ಹೆಚ್ಚಿದೆ, ಆದರೆ ಇನ್ನಷ್ಟು ಉತ್ತಮ ಬದಲಾವಣೆಗಳನ್ನು ನಾಗರಿಕರಿಗೆ ಬಹಳ ಅವಶ್ಯಕತೆಇದೆ, ಸೂಚನ ಫಲಕ ಕಡ್ಡಾಯ ಸೇವೆಗಳನ್ನು ಒದಗಿಕೊಡುವರ ರೀತಿ, ಶುಲ್ಕ ದಾಖಲಾತಿ ಪಟ್ಟಿ ಪ್ರದರ್ಶಿಸುವುದು ಕಡ್ಡಾಯ ಮಾಡಲೇ ಬೇಕು, ಆಗಷ್ಟೆ ಬಹಳಷ್ಟು ಸುಧಾರಣೆಗಳು ಸಾಧ್ಯ."

**ED0990000075280,**
**ಶ್ರೀ ಕೆ ಬಿ ಅರಕೆರೆ  ಜಿ ಹೆಚ್ ಎಸ್ ಹಿರೀಕೊಪ್ಪ,**
**ನಗರಗುಂದ್**, ಗದಗ.
"ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಯ ಸೇವೆ "10/15/20 ವರ್ಷ ಕಾಲಮಿತಿಯ ಬಡ್ತಿಗಾಗಿ ಕೋರಿದ್ದೆ, ದೊರಕಿತು, ನನಗೆ ಸಕಾಲದ ಬಗ್ಗೆ ತಿಳಿದಿದೆ, ಆದರೆ ಇನ್ನೂ ಬಹಳಷ್ಟು ಜನರಿಗೆ ಸಕಾಲದ ಬಗ್ಗೆ ತಿಳದಿಲ್ಲಾ, ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ"

**ಗಾಯಿತ್ರಿ ಡಿ ಎ,**

**ಹರಿಹರ,**

ನಗರಸಭೆಗೆ ಸಂಬಂಧಿತ ಸೇವೆ ಕಟ್ಟಡ ಪರವಾನಿಗೆ ಕೇಳಿದ್ದೆ. ಎಲ್ಲಾ ದಾಖಾಲಾತಿ ಇದ್ದರೂ ಅರ್ಜಿ ತಿರಸ್ಕರಿಸಿದ್ದಾರೆ, ಲಂಚದ ಆಸೆಗೆ ಅರ್ಜಿ ತಿರಸ್ಕಾರ ಮಾಡುವುದು ಪದ್ಧತಿಯಾಗಿದೆ, ಅಧಿಕಾರಿಗಳು ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸದೆ ನಾಗರಿಕರಿಗೆ ವ್ಯರ್ಥ ಹೆಚ್ಚಿನ  ಹಣ ನೀಡಿ ಎಂದು ಪೀಡಿಸುವುದು ತಪ್ಪು, ಈ ಪದ್ಧತಿಯನ್ನು ತೊಡೆದು ಹಾಕುವಲ್ಲಿ ಸಕಾಲ ಶ್ರಮಿಸಬೇಕಿದೆ "

**SS0990000557236**

**ಕೆ ಶಿವಲಿಂಗಪ್ಪ ಬಿನ್ ಕರಿಯಪ್ಪ,**

"ಸರ್ವೆ ಇಲಾಖೆಯಲ್ಲಿ ಆಕಾರ್ ಬಂದ್ ಸೇವೆಗಾಗಿ ಕೋರಿದ್ದರು ಸಿಕ್ಕಿದೆ, ಆದರೆ ಅವರು ಜಿ ಎಸ್ ಸಿ ಸ್ವೀಕೃತಿ ಪತ್ರ ನೀಡಲಿಲ್ಲಾ, ಇದಕ್ಕೆ ಕಾರಣವೇನು? ನಾಗರಿಕರು ಕಾಲಮಿತಿಯಲ್ಲಿ ಸೇವೆ ನೀಡಿ ಎಂದು ಬೇಡಿಕೆ ಮಾಡಬಹುದೆಂದು, ಈ ಸಕಾಲದ ಈ ಪದ್ಧತಿಯನ್ನು ಸರಕಾರದ ಕಛೇರಿಗಳು ಮರೆಮಾಚುತ್ತಿದ್ದಾರೆ, ಸ್ವೀಕೃತಿ ಪತ್ರ ನೀಡದಿದ್ದಲ್ಲಿ ದಂಡ ಎಂಬ ಕಾನೂನು ತಿದ್ದುಪಡಿಯಾಗಬೇಕು, ಸಕಾಲ ಆಡಳಿತ ನಿರ್ವಹಣೆಯಲ್ಲಿ ಮತ್ತಷ್ಟು ಸುಧಾರಣೆಯಾಗುತ್ತದೆ"

**L40990000149950**

**ಷಕೀರ್ ಆಲಿ ಬೇಗ್,**

**ಚನ್ನಗಿರಿ,**

" ಪಟ್ಟಣ ಪಂಚಾಯತ್‌ನಲ್ಲಿ ಎಲ್ಲಾ ಸರಿಯಿದ್ದರು ಪಾಲಿಕೆಯವರು ನನ್ನ ಅರ್ಜಿ (ಜನನ ಪ್ರಮಣ ಪತ್ರ ಬೇಡಿಕೆ) ತಿರಸ್ಕೃತ ಮಾಡಿದ್ದಾರೆ, ಹೆಚ್ಚಿನ ಹಣ ಬೇಡಿಕೆಗಾಗಿ ಇರಬೇಕು. ಇದೇ ಕಾರಣಕ್ಕೆ ನಾನು ಸಕಾಲ ಕರೆ ಕೇಂದ್ರ ದೂರು ನೀಡಿರುವೆನು, ಇದನ್ನು ನಿಯಂತ್ರಣ ಮಾಡುವ ಕ್ರಮವೆಂದರೆ ಸೂಚನಾ ಫಲಕ ಕಡ್ಡಾಯ, ಯಾವ ಸೇವೆ ಹೇಗೆ ಪಡೆಯುವುದು ಶುಲ್ಕ, ಕಾಲಮಿತಿ, ಪರಿಹಾರ ಧನ,

ಸಂಬಂಧಪಟ್ಟ ಅಧಿಕಾರಿ, ದಾಖಲಾತಿಗಳ ಪಟ್ಟಿ ಇತರೆ ವಿಚಾರಗಳು ಕಛೇರಿಯ ಮುಂದೆ ಕಡ್ಡಾಯವಾಗಿ ಪ್ರದರ್ಶಿತವಾಗಬೇಕು, ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವುದು ಕೂಡ ಕಡ್ಡಾಯ, ಆಗಷ್ಟೆ ಲಂಚ ಕೇಳುವ ಪದ್ಧತಿ ಕಡಿಮೆಯಾಗುತ್ತದೆ"

**RD0039146006532,**

**.ಸುಪ್ರಭ, ತೀರ್ಥಹಳ್ಳಿ,**

ಕಂದಾಯ ಇಲಾಖೆಯ ಸೇವೆಗಾಗಿ ಕೋರಿದ್ದೆ (ಆದಾಯ ಪ್ರಮಾಣ ಪತ್ರ) ಕಾಲಮಿತಿಯಲ್ಲಿ ದೊರಕಿತು, ಆದರೆ ಈ ಮೊದಲು ನನ್ನ ಅರ್ಜಿ ತಿರಸ್ಕೃತವಾಗಿತ್ತು. ಐ ಡಿ ಹೊಂದಾಣಿಕೆ ಆಗದೆ ಇರುವುದರಿಂದ ಎಂದು ಕಾರಣ ನೀಡಿದ್ದರು, ದಾಖಾಲಾತಿ ಪಟ್ಟಿ ಗೊಂದಲವೇ ಇದಕ್ಕೆ ಕಾರಣ, ಸೇವೆಗಳನ್ನು ನೀಡುವ ಬಗ್ಗೆ ಸರಿಯಾದ ಮಾಹಿತಿ ಪ್ರದರ್ಶನ ಇಲ್ಲವೆ ಇಲ್ಲ, ಇದರಿಂದ ಅರ್ಜಿಗಳು ತಿರಸ್ಕೃತವಾಗುತ್ತಿವೆ, ನಾಗರಿಕರು ವ್ಯರ್ಥ ಸುತ್ತಾಡುತ್ತಿದ್ದಾರೆ. ಇದರ ಬಗ್ಗೆ ಮಿಷನ್ ಸೂಕ್ತ ಗಮನಹರಿಸುವುದು"

**ಸುನಿತ,**

**ಚಿಕ್ಕಬಳ್ಳಾಪುರ,**

**ಗ್ರಾಮೀಣಾಭಿವೃದ್ಧಿ ಇಲಾಖೆಯ ಕುಡಿಯುವ ನೀರಿನ ಬಗ್ಗೆ ಮನವಿ**

"ಸಕಾಲದ ಬಗ್ಗೆ ನನಗೆ ಪತ್ರಿಕೆಗಳಂದ ತಿಳದು ಬಂತು, ಕುಡಿಯುವ ನೀರಿನ ಸಮಸ್ಯೆಯಿತ್ತು, ಚಿಂತಾಮಣಿ ಗ್ರಾಮ ಪಂಚಾಯತ್ ನಲ್ಲಿ ದೂರು ಕೊಟ್ಟರು ಸರಿಯಾಗಿ ಸ್ಪಂದಿಸಲಿಲ್ಲ, ಸಕಾಲ ಕರೆಕೇಂದ್ರಕ್ಕೆ ಕರೆಮಾಡಿ ದೂರು ಕೊಟ್ಟೆ, ಅಲ್ಲಿ ದೂರನ್ನು ದಾಖಲಿಸಿದರು ಹಾಗೂ ಕೋರಿದ ಸೇವೆಯು ದೊರಕಿತು, ಕೇವಲ ಒಂದು ಕರೆಯಿಂದ ದೂರನ್ನು ಪರಿಹರಿಸಿದರು, ನನಗೆ ಸಕಾಲ ಕರೆಕೇಂದ್ರದ ಕಾರ್ಯ ವೈಖರಿಯಿಂದ ಸಂತಸವಾಗಿದೆ, ನಾಗರಿಕರ ಭವಣೆಯನ್ನು ಅರಿತು ಸ್ಪಂದಿಸುತ್ತಿರುವ ಸಕಾಲವ ಮಿಷನ್‌ಗೆ ಧನ್ಯವಾದಗಳು"

**ಗುರು,**

**ಅಥಣಿ, ಬೆಳಗಾಂ,**

"ಕಂದಾಯ ಇಲಾಖೆಯಲ್ಲಿ ಜಾತಿ ಪ್ರಮಾಣ ಪತ್ರಕ್ಕೆ ಕೋರಿದ್ದೇ ಇನ್ನೂ ನೀಡಿಲ್ಲಾ, ಸಕಾಲದಡಿ ಕಾಲಮಿತಿಯಿದ್ದರೂ ಇನ್ನೂ ಕೆಲವು ಅಧಿಕಾರಿಗಳು ಸಮಯಬದ್ಧವಾಗಿ ಸೇವೆ ನೀಡುತ್ತಿಲ್ಲಾ, ವಿಳಂಬ ಮಾಡುವವರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಿ, ಇದರಿಂದಷ್ಟೆ ನಾಗರಿಕರ ಭವಣೆಯನ್ನು ಅರಿತು ಸಿಬ್ಬಂದಿಗಳು ಸರಿಯಾಗುತ್ತಾರೆ."

**ED0990000075280,**

**ಶ್ರೀ ಕೆ ಬಿ ಅರಕೆರೆ ಜಿ ಹೆಚ್ ಎಸ್ ಹಿರೀಕೊಪ್ಪ,**

**ನಗರಗುಂದ್**, ಗದಗ.

"ಸಿಬ್ಬಂದಿ ಮತ್ತು ಆಡಳತ ಸುಧಾರಣೆಯ ಸೇವೆ "10/15/20 ವರ್ಷ ಕಾಲಮಿತಿಯ ಬಡ್ತಿಗಾಗಿ ಕೋರಿದ್ದೆ, ದೊರಕಿತು, ನನಗೆ ಸಕಾಲದ ಬಗ್ಗೆ ತಿಳದಿದೆ, ಆದರೆ ಇನ್ನೂ ಬಹಳಷ್ಟು ಜನರಿಗೆ ಸಕಾಲದ ಬಗ್ಗೆ ತಿಳದಿಲ್ಲಾ, ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ"

**ಮೋಹನ್,**
**ಹೊನ್ನಾಳಿ,**
**ದಾವಣಗೆರೆ**

"ವೇತನ ಪ್ರಮಾಣ ಪತ್ರ ಪಡೆದುಕೊಳ್ಳುವ ವಿಧಾನಕ್ಕಾಗಿ ಕರೆ ಕೇಂದ್ರಕ್ಕೆ ಕರೆ ಮಾಡಿದ್ದೆ, ವಿವರಿಸಿದರು, ಸೇವೆಯು ಶೀಘ್ರವಾಗಿ ದೊರಕಿತು, ಸರಕಾರಿ ಸೇವೆಯ ವಿಲೇವಾರಿ ಕ್ರಮ ಈಗ ಬಹಳ ಉತ್ತಮವಾಗಿದೆ, ಮತ್ತಷ್ಟು ನಾಗರಿಕರಿಗೆ ಅವಶ್ಯಕವಾಗಿರುವ ಸರಕಾರಿ ಸೇವೆಗಳು ಸಕಾಲಕ್ಕೆ ಸೇರಬೇಕು."

**ಪಿ. ಮೋಹನ್ ಆಚಾರ್ಯ**

**ಉಡುಪಿ**

ವಾಣಿಜ್ಯ ಇಲಾಖೆಯ ನಿವೃತ್ತ ಪ್ರಬಂಧಕರಾಗಿದ್ದರು. ಅವರ ವೈಯ್ಯುಕ್ತಿಕ ಆಸ್ತಿಯ ಬಗ್ಗೆ ವಿವರಣೆಯನ್ನು ಪಡೆಯಲು ಕಾರ್ಕಳ ತಾಲೂಕು ಕಛೇರಿಗೆ ಬೇಟಿ ನೀಡಿದಾಗ ಅವರಿಗೆ ಅಲ್ಲಿ ಸರಿಯಾದ ಮಾಹಿತಿಯು ದೊರಕಿಲ್ಲವಾದುದ್ದರಿಂದ ಸಕಾಲ ಮಿಷನ್‌ಗೆ ದೂರು ನೀಡಿರುತ್ತಾರೆ. ಸಕಾಲದಲ್ಲಿ ನೀಡುತ್ತಿರುವ ಅರ್ಜಿಗಳ ಸ್ವೀಕೃತಿಯ ಬಗ್ಗೆ ಅರ್ಜಿಯು ಸ್ವಿಕೃತಿಯಾದ ಮಾಹಿತಿ ಹಾಗೂ Approve ಆದ ಬಗ್ಗೆ ಮಾತ್ರ ವಿಷಯ ನಾಗರಿಕರಿಗೆ ತಿಳಿಸುತ್ತದೆ ಹೊರತು ಅದರ ಮಧ್ಯೆ ನಡೆಯುವ ಕಾರ್ಯ ವೈಖಾರಿಗಳ ಬಗ್ಗೆಯೂ ತಿಳಿಯುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

**ರಿಯಾಜ್ ಅಹಮದ್,**

**ಯಾದಗಿರಿ,**

ಒಳಾಡಳಿತ ಸೇವೆಗಾಗಿ (ಪೊಲೀಸ್ ಇಲಾಖೆಯಿಂದ ಪರಿಶೀಲನೆ) ಕೋರಿದ್ದರು "ಮನೆಯಲ್ಲೆ ಕುಳಿತು ನಾನು ಕೋರಿದ ಸೇವೆಯ ಸ್ಥಿತಿಯನ್ನು ತಿಳಿಯಬಹುದು ಇದು ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ ಎಂದರೆ ಆಶ್ವರ್ಯದ ವಿಷಯವೇ ಸರಿ. ಸಕಾಲದಿಂದ ಸರಕಾರಿ ಆಡಳಿತದಲ್ಲಿ ಆವಿಷ್ಕಾರಿ ಬದಲಾವಣೆಗಳಾಗಿದೆ."

# ಅಧ್ಯಾಯ – 4

# ಘಟನಾವಳಿ ಮತ್ತು ಪತ್ರಿಕಾ ವರದಿಗಳು

## 'ಸಕಾಲ' ಪ್ರಾತ್ಯಕ್ಷಿಕೆಗೆ ದೆಹಲಿಯಲ್ಲಿ ಪ್ರಶಸ್ತಿ

ಬೆಂಗಳೂರು 4ನೇ ಫೆಬ್ರವರಿ: ನವದೆಹಲಿಯಲ್ಲಿ ನಡೆದ "FICCI Conference on Quality Practices (QUPRAC) 2014" ಸಮ್ಮೇಳನದಲ್ಲಿ 'ಸಕಾಲ' ಯೋಜನೆಯ **ಪ್ರಾತ್ಯಕ್ಷಿಕೆಗೆ 'ಅತ್ಯುತ್ತಮ ಪ್ರಾತ್ಯಕ್ಷಿಕೆಯ** ಪ್ರಶಸ್ತಿ' ಲಭಿಸಿರುತ್ತದೆ.

ಯೋಜನಾ ಆಯೋಗದ ಸದಸ್ಯರಾದ ಶ್ರೀ ಅರುಣ್ ಮೈರಾ ಸಮಿತಿಯ ಅಧ್ಯಕ್ಷರಾಗಿರುವ "Quality Practices (QUPRAC) 2014 Scientific Committee" ಎಂಬ ಸಮಿತಿಯು ಫೆಡೆರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ, ನವದೆಹಲಿ, ಮತ್ತು ಯೋಜನಾ ಆಯೋಗದ ಸಹಯೋಗದೊಂದಿಗೆ ಈ ಸಮ್ಮೇಳನವನ್ನು ಆಯೋಜಿಸಿತ್ತು. ಸದರಿ ಸಮಿತಿಯಲ್ಲಿ ಡಾ: ಶಾಲಿನಿ ರಜನೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಆಸು), ಇವರು ಸಹ ಒಬ್ಬ ಸದಸ್ಯರಾಗಿರುತ್ತಾರೆ.

ನವದೆಹಲಿಯಲ್ಲಿ ದಿನಾಂಕ: 3.2.22014 ಮತ್ತು 4.2.2014 ರಂದು ನಡೆದ ಈ ಸಮ್ಮೇಳನದಲ್ಲಿ ಡಾ: ಶಾಲಿನಿ ರಜನೀಶ್ ಮತ್ತು ಶ್ರೀ ಆರ್.ಮನೋಜ್, ಅಪರ ನಿರ್ದೇಶಕರು, ಸಕಾಲ ಮಿಷನ್, ಇವರು ಭಾಗವಹಿಸಿ 'ಸಕಾಲ' ಯೋಜನೆಯ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದ್ದರು.

ಇದರಿಂದಾಗಿ ಈಗ ಸಕಾಲ ಯೋಜನೆಗೆ ಮತ್ತೊಂದು ಗರಿ ಮೂಡಿದಂತಾಗಿದೆ.

**ಆಡಳಿತಕ್ಕೆ ನವೀನ ಮಾದರಿಗಳನ್ನು ಒದಗಿಸಿ – ಪ್ರೊಬೆಷನರಿ ಅಧಿಕಾರಿಗಳಿಗೆ ಡಾ॥ ಶಾಲಿನಿ ರಜನೀಶ್ ಕಿವಿ ಮಾತು:–** ಬೆಂಗಳೂರು, ಫೆ.6: ಹೊಸದಾಗಿ ಅಧಿಕಾರ ವಹಿಸಿಕೊಳ್ಳಲಿರುವ ಐ.ಎ.ಎಸ್ ಅಧಿಕಾರಿಗಳು ಆಡಳಿತ ರಂಗದಲ್ಲಿನ ಸಿದ್ಧ ಮಾದರಿಗಳನ್ನು ಬಿಟ್ಟು ಹೊಸದಾದ, ಜನಸ್ನೇಹಿಯಾದ ಮಾರ್ಗಗಳನ್ನು ಹುಡುಕುವುದು ಸೂಕ್ತ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಕಾಲ ಮಿಷನ್ ನಿರ್ದೇಶಕರಾದ ಡಾ॥ ಶಾಲಿನಿ ರಜನೀಶ್ ಕರೆ ನೀಡಿದರು.



ಇದೇ ದಿನದಂದು ರಾಜ್ಯದಲ್ಲಿ ಸಕಾಲ ಯೋಜನೆಯ ಬಗ್ಗೆ ತರಬೇತಿ ಪಡೆಯಲು ಮಸ್ಸೂರಿಯ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಅಕಾಡೆಮಿ ಆಫ್ ಅಡ್ಮಿನಿಷ್ಟ್ರೇಷನ್‌ನಿಂದ ಆಗಮಿಸಿದ್ದ 30 ಪ್ರೊಬೆಷನರಿ ಐ.ಎ.ಎಸ್ ಅಧಿಕಾರಿಗಳ ತಂಡಕ್ಕೆ ಸಕಾಲ ಯೋಜನೆಯ ಕುರಿತು ವಿವರಗಳನ್ನು ನೀಡುತ್ತಾ ಅವರು ಮಾತನಾಡುತ್ತಿದ್ದರು. ಶ್ರೀಮತಿ .ನಿಧಿ ಮಲಿಕ್‌ರವರು ತಂಡದ ನೇತೃತ್ವ ವಹಿಸಿದ್ದರು.

ಪೈಲಟ್ ಯೋಜನೆ ಅನುಷ್ಠಾನದಿಂದ ಹಿಡಿದು ಅತ್ಯಂತ ಜನಪ್ರಿಯವಾದ ಮತ್ತು ಜನಪರವಾದ ಕಾನೂನಾಗಿ ರೂಪುಗೊಳ್ಳುವವರೆಗೆ ಮತ್ತು ಪ್ರಸ್ತುತ 447 ಸೇವೆಗಳನ್ನು ಕಾಲಮಿತಿಯೊಳಗೆ ನಾಗರಿಕರಿಗೆ ಒದಗಿಸುತ್ತಿರುವ ಸಕಾಲ ಯೋಜನೆಯ ಯಶಸ್ಸಿನ ಬಗೆಗೆ ಅವರು ಸಾದ್ಯಂತವಾಗಿ ವಿವರಣೆ ನೀಡಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಮಿಷನ್ ನಿರ್ದೇಶಕ ಮನೋಜ್ ಮಾತನಾಡಿ ಭಷ್ಟಾಚಾರ ನಿರ್ಮೂಲನೆ ಮತ್ತು ಪಾರದರ್ಶಕ ಆಡಳಿತ ಒದಗಿಸುವಲ್ಲಿ ಸಕಾಲ ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ಕಾಲಮಿತಿಯೊಳಗೆ ಸೇವೆಗಳನ್ನು ಜನರಿಗೆ ಒದಗಿಸುವಲ್ಲಿ ನವೀನ ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ಸಕಾಲ ಯಶಸ್ವಿಯಾಗಿದೆ ಎಂದರು.



ವಾರ್ತಾ ಇಲಾಖೆ ಜಂಟಿ ನಿರ್ದೇಶಕರು ಹಾಗೂ ಸಕಾಲ ನೋಡಲ್ ಅಧಿಕಾರಿ(ಪ್ರಚಾರ) ಡಾ: ಬಿ.ಆರ್.ಮಮತಾ ಮಾತನಾಡಿ, ಸಕಾಲ ಯೋಜನೆ ಪ್ರಾರಂಭಕ್ಕೂ ಮುನ್ನ ನಾಗರಿಕರಲ್ಲಿ ಯೋಜನೆಯ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಮಾಡಲಾಗಿತ್ತು. ಸಕಾಲ ಯಶಸ್ಸಿಗೆ ಬಹುಶ: ಇದೂ ಕಾರಣ ಎಂದರು. ಯೋಜನೆಗೆ ಹೆಸರು, ಘೋಷವಾಕ್ಯ ಹಾಗೂ ಲಾಂಛನ ನೀಡಲು ಸಹ ನಾಗರಿಕರನ್ನು ಭಾಗೀದಾರರನ್ನಾಗಿಸಿಕೊಳ್ಳಲಾಗಿತ್ತು ಎಂದರು. ನವೀನ ಮಾಧ್ಯಮಗಳಾದ ಸಾಮಾಜಿಕ ಜಾಲತಾಣಗಳಾದ ಟ್ವಿಟರ್, ಫೇಸ್‌ಬುಕ್ ಹಾಗು ಯೂ-ಟ್ಯೂಬ್‌ಗಳನ್ನು ಮೊತ್ತಮೊದಲ ಬಾರಿಗೆ ಬಳಕೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಕಾಲ ಕಾಲ್‌ಸೆಂಟರ್ ಅಧಿಕಾರಿ ಶ್ರೀ ದರ್ಶನ್ ಚಿನ್ನಪ್ಪ, ಸಕಾಲ ಕಾಲ್ ಸೆಂಟರ್ ನಿರ್ವಹಣಾ ವಿಧಾನವನ್ನು ವಿವರಿಸಿದರು. ಕಾಲ್‌ಸೆಂಟರ್‌ನಲ್ಲಿ ಸ್ವೀಕೃತವಾಗುವ ಕರೆಗಳಲ್ಲಿ ಹೆಚ್ಚಿನವು ಸಕಾಲಕ್ಕೆ ಸಂಬಂಧಪಡದ ಕರೆಗಳು ಬರುತ್ತವೆ. ಈ ಕರೆಗಳಿಗೂ ಸ್ಪಂದಿಸಿ ಸೂಕ್ತ ನೆರವನ್ನು ಕಾಲ್‌ಸೆಂಟರ್ ಒದಗಿಸಿದೆ. ಕರೆ ಮಾಡಿದ ನಂತರ ನಾಗರಿಕರಿಗೆ ಸೇವೆ ಒದಗುವವರೆಗೆ ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಯೊಂದಿಗೆ ಫಾಲೋಅಪ್ ಮಾಡಲಾಗುತ್ತದೆ ಎಂದು ದರ್ಶನ್ ತಿಳಿಸಿದರು. ಎನ್.ಐ.ಸಿ ಅಧಿಕಾರಿ ಶ್ರೀನಿವಾಸ್ ಡಾಟಾ ಸೆಂಟರ್ ಕುರಿತು ವಿವರಣೆ ನೀಡಿದರು. ಸಕಾಲ ಆಡಳಿತಾಧಿಕಾರಿ ಶ್ರೀ ವರಪ್ರಸಾದ್‌ರೆಡ್ಡಿ ಉಪಸ್ಥಿತರಿದ್ದರು.

## ಡಾ|| ಶಾಲಿನಿ ರಜನೀಶ್ ಅವರಿಗೆ ವಿಶಾಲಾಕ್ಷಿ ಪುರಸ್ಕಾರ:

ಬೆಂಗಳೂರು, ಫೆಬ್ರವರಿ 10: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಸಕಾಲ ಮಿಷನ್ ನಿರ್ದೇಶಕರಾದ ಡಾ: ಶಾಲಿನಿ ರಜನೀಶ್ ಅವರಿಗೆ ಆರ್ಟ್ ಆಫ್ ಲಿವಿಂಗ್ ಪ್ರತಿಷ್ಠಾನ ನೀಡುವ ಪ್ರತಿಷ್ಠಿತ ವಿಶಾಲಾಕ್ಷಿ ಪುರಸ್ಕಾರ ದೊರೆತಿದೆ.

ಉತ್ತಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುತ್ತಿರುವ ಮಹಿಳೆಯರಿಗೆ ನೀಡುವ ಈ ಪ್ರಶಸ್ತಿಯನ್ನು ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕರಾದ ಶ್ರೀ ರವಿಶಂಕರ್ ಗುರೂಜಿಯವರ ತಾಯಿಯವರ ಸ್ಮರಣಾರ್ಥ ಸ್ಥಾಪಿಸಲಾಗಿದೆ.



ಕರ್ನಾಟಕ ಸರ್ಕಾರ ರೂಪಿಸಿರುವ ಜನಪರ ಯೋಜನೆಯಾದ 'ಸಕಾಲ'ದ ಪರಿಣಾಮಕಾರಿ ಅನುಷ್ಠಾನದ ಮುಖಾಂತರ ಭ್ರಷ್ಟಾಚಾರ ನಿರ್ಮೂಲನೆ, ಪಾರದರ್ಶಕತೆ ಸಾಧಿಸುವಲ್ಲಿ ಹಾಗೂ ನಾಗರಿಕರಿಗೆ ಸಮಯಬದ್ಧ ಸೇವೆ ಒದಗಿಸುವಲ್ಲಿ ಮಹತ್ವದ ಕಾರ್ಯನಿರ್ವಹಿಸುತ್ತಿರವ ಡಾ: ಶಾಲಿನಿ ರಜನೀಶ್ ಅವರ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

ಪ್ರಶಸ್ತಿಫಲಕ ಹಾಗೂ 50 ಸಾವಿರ ರೂ.ಗಳ ನಗದು ಬಹುಮಾನವನ್ನು ಪ್ರಶಸ್ತಿ ಒಳಗೊಂಡಿದೆ. ಪ್ರಶಸ್ತಿ ಸ್ವೀಕರಿಸಿದ ಡಾ: ಶಾಲಿನಿ ರಜನೀಶ್ ಅವರು ಪ್ರಶಸ್ತಿಯ ಮೊತ್ತವನ್ನು ಸಕಾಲ ಕಿಯಾಸ್ಕ್ ಒಂದನ್ನು ಸ್ಥಾಪಿಸಲು ನೀಡಿ ತಮ್ಮ ಅಪರೂಪದ ಕಾಳಜಿಯನ್ನು ಮೆರೆದರು.

**12.02.2014: ಆರ್ ಎಫ್ ಡಿ ಸಭೆ:** ಈ ಸಭೆಯಲ್ಲಿ ಸಕಾಲದ ಸೇವಾ ವಿತರಣೆ ವ್ಯವಸ್ಥೆ ಮತ್ತು ಅದರ ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಸುವಂತೆ ಭಾರತ ಸರ್ಕಾರದ ಮಾಜಿ ಕಾರ್ಯದರ್ಶಿಗಳಾದ ಶ್ರೀ ಶಾಂತನು ಕಾನ್ಸಲ್ ಸಲಹೆ ನೀಡಿದರು.

ಮಿಷನ್ ನಿರ್ದೇಶಕರು ಈ ಸಭೆಯಲ್ಲಿ ಸಕಾಲ ಪ್ರಗತಿ ಬಗ್ಗೆ ವಿವರಿಸಿದರು, ಶ್ರಿ ಮೋಹನ್ ದಾಸ್ ರವರು ಮುಂದಿನ ದಿನಗಳಲ್ಲಿ ಇನ್ನೂ ಉತ್ತಮ ಮಟ್ಟದ ವಿಶ್ಲೇಷಣೆಯನ್ನು ಮಾಡಬೇಕಾದ ಅವಶ್ಯಕತೆ ಇದೆ. ಉದಾಹರಣೆಗೆ ಒದಗಿಸಲಾದ ದಾಖಾಲಾತಿಗಳ ಪಟ್ಟಿಯ ಸರಳಕರಣ, ಅರ್ಜಿ ತಿರಸ್ಕೃತಗಳ ಕಾರಣ ನಿಯಂತ್ರಣ ಮಾಡಲು ತೆಗೆದುಕೊಳ್ಳಬೇಕಾದ ಕ್ರಮ ಹಾಗೂ ನಿರಂತರ ವಾಗಿ ಸರಳೀಕರಣಕ್ಕೆ ಒತ್ತುಕೊಟ್ಟು ಕ್ರಮಗಳು ಕಾರ್ಯರೂಪಕ್ಕೆ ಬರುವವರೆಗೂ ಶ್ರಮಿಸಬೇಕಾದ ಅವಶ್ಯಕತೆ ಇರುವುದೆಂದು ಮಾನ್ಯರು ತಿಳಿಸಿದರು, ಇದಕ್ಕಾಗಿ ಪ್ರಾವಿಣ್ಯತೆಯಿರುವ ವಿಶ್ಲೇಷಕರನ್ನು ನೇಮಿಸಿ ಅವರಿಂದ ಮಿಷನ್ ಸಿಬ್ಬಂದಿಗಳಿಗೆ ತರಬೇತಿ ನೀಡಿ ಇನ್ನೂ ಉತ್ತಮ ವಿಶ್ಲೇಷಣೆಯಿಂದ ಇನ್ನೂ ಹೆಚ್ಚಿನ ಬದಲಾವಣೆ ಸರಳಕರಣ ಸಾಧಿಸಬಹುದು ಎಂದು ತಿಳಿಸಿದರು



ಸಕಾಲ ಯೋಜನೆಯ ಜನವರಿ ಮಾಹೆಯ ವರದಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು. ಯೋಜನೆಯನ್ನು ಸರಳಗೊಳಿಸುವ ಕುರಿತು ನಾಗರಿಕರಿಂದಲೂ ಸಲಹೆಗಳನ್ನು ಪಡೆಯುವಂತೆ ಅವರು ಸೂಚಿಸಿದರು. ಡಾಟಾ

ವಾಲಿಡೇಷನ್ (ದತ್ತಾಂಶ ದೃಢೀಕರಣ) ಮತ್ತು ಹೆಚ್ಚಿನ ಮೌಲ್ಯಾಧಾರಿತ ವರದಿಗಳ ತಯಾರಿಕೆಯತ್ತ ಗುರಿನೆಟ್ಟಿರುವ ಎರಡನೇ ಪೀಳಿಗೆಯ ಮಾರ್ಪಾಟುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಸಲಹೆ ನೀಡಿದರು.

ಸಭೆಯಲ್ಲಿ ಮಿಷನ್ ನಿರ್ದೇಶಕರು ಸಕಾಲ ಕಾರ್ಯ ವೈಖರಿ, ಜಾಗೃತಿ ಕಾರ್ಯಕ್ರಮದ ಬಗ್ಗೆ ವಿವರಿಸಿದರು ಹಾಗೂ ಸೇವೆಗಳ ಸರಳಕರಣಕ್ಕೆ ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ವಿವರಿಸಿದರು. ಶ್ರೀ ಮೋಹನ್ ದಾಸ್ ಪೈ ರವರು ಈ ಬಗ್ಗೆ ಶ್ಲಾಘಿಸಿ ಕೆಲವು ಸೇವೆಗಳು ಮಾತ್ರ ಸರಳಗೊಂಡಿವೆ ಸಕಾಲದಲ್ಲಿರುವ 478 ಸೇವೆಗಳ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ವಿಶ್ಲೇಷಿಸಿ ಮತ್ತೂ ಹೆಚ್ಚು ಸೇವೆಗಳ ಸರಳಕರಣಕ್ಕೆ ಒತ್ತು ಕೊಟ್ಟು ಸೇವೆಗಳ ನಿರ್ವಹಣೆಯನ್ನು ಸರಳಗೊಳಸಬೇಕೆಂದು ಸಲಹೆಯಿತ್ತರು.




ಆಡಳಿತದಲ್ಲಿ ಹೊಸ ಮಾದರಿಗಳನ್ನು ಕಾರ್ಯರೂಪಕ್ಕೆ ತರುವ ಮಹತ್ವದ ಬಗ್ಗೆ ಬೆಳಕುಚೆಲ್ಲಿದ ಅವರು, ಅತ್ಯುತ್ತಮ ಸುಧಾರಣಾ ಪದ್ಧತಿಗಳನ್ನು ಇನ್ನೋವೇಷನ್ ಕೌನ್ಸಿಲ್ ವತಿಯಿಂದ ಮೌಲ್ಯಮಾಪನ ಮಾಡಿಸಿ ದಾಖಲಿಸುವಂತೆ ಸೂಚಿಸಿದರು. ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ಪೋರ್ಟಲ್ ಆದ ಇ-ಜನಸ್ಪಂದನದ ಮೂಲಕ ಮುಖ್ಯಮಂತ್ರಿಗಳ ಜನತಾ ದರ್ಶನ ಕಾರ್ಯಕ್ರಮ ಸುಗಮವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಅವರು ಹರ್ಷ ವ್ಯಕ್ತಪಡಿಸಿದರು.

ಎಟಿಎಫ್ ಎಕ್ಸ್‌ಪರ್ಟ್ ಗ್ರೂಪ್‌ನ ಸದಸ್ಯರಾದ ಶ್ರೀ ಮೋಹನ್‌ದಾಸ್ ಪೈ, ಕಳೆದ 18 ತಿಂಗಳಿನಿಂದ ಸಕಾಲ ಮಿಷನ್ ಕೈಗೊಂಡಿರುವ ವಿಶಿಷ್ಟ ಹಾಗೂ ಪ್ರಜಾಸತ್ತಾತ್ಮಕ ಗುಣವುಳ್ಳ ನಾಗರಿಕ ಆಧಾರಿತ ಕಾರ್ಯಕ್ರಮಗಳ ಬಗ್ಗೆ ಶ್ಲಾಘಿಸಿದರು.

**<u>ಡ್ಯೂಕ್ ಸ್ಯಾನ್ ಫೋರ್ಡ್ ವಿಶ್ವವಿದ್ಯಾನಿಲಯ – ಡಿ ಪಿ ಆರ್ ಪಿ ಜಿ ಕಾರ್ಯಕ್ರಮ:</u>**

ಭಾರತದ ಹಲವಾರು ಉತ್ತಮ ಕಾರ್ಯವೈಖರಿಗಳ ಬಗ್ಗೆ ಅಮೇರಿಕ ಕಲಿಯಬೇಕಾದದು ಬಹಳ ಇದೆ ಎಂದು ಡ್ಯೂಕ್ ವಿಶ್ವ ವಿದ್ಯಾನಿಲಯದ ಪ್ರೋಫೆಸರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಡ್ಯೂಕ್ ವಿಶ್ವವಿದ್ಯಾನಿಲಯದ ಶ್ರೀ ಡೆರೆಕ್ ಡೆಲಾಂಗ್, ಹಿರಿಯ ಕಾರ್ಯಕ್ರಮ ನಿರ್ವಾಹಕರು ಕೂಡ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು, ಭಾರತ ಆಡಳಿತ ನಿರ್ವಹಣೆ ವಿಚಾರದಲ್ಲಿ ಕೆಲವೊಂದು ಅತ್ಯುತ್ತಮ ಅವಿಷ್ಕಾರದಲ್ಲಿ ಪ್ರಾಮುಖ್ಯವೆನಿಸಿದ ಸಕಾಲ ಸೇವೆಗಳ ಅಧಿನಿಯಮ, ಆಂಧ್ರ ಸರಕಾರ ಇ ಸೇವಾ, ಗುಜರಾತಿನ ಚಿರಂಜಿವಿ ಯೋಜನೆ ಅಸಫಲತೆ ಬಗ್ಗೆ ಕೂಡ ಚರ್ಚಿಸಲಾಯಿತು. ಉತ್ತರ ದಕ್ಷಿಣ ಕ್ಯಾಲಿಫೋರ್ನಿಯ ಹಾಗೂ ಅಮೇರಿಕದಲ್ಲಿ ಜಾರಿಯಲ್ಲಿರುವ ಮಕ್ಕಳು ಹಾಗೂ ಕುಟುಂಬ ನಿಯಮದ ಬಗ್ಗೆ ಕೂಡ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು. ಸಾಮಾಜಿಕ ಹಾಗೂ ಅರ್ಥಶಾಸ್ತ್ರದಲ್ಲಿ ಇರುವ ಕೆಲವು ಕ್ಲಿಷ್ಟ ಅಂತರದಿಂದ ರಾಷ್ಟ್ರದ ಅಭಿವೃದ್ದಿಯ ಪರಣಾಮದ ವಿಷಯಗಳ ಬಗ್ಗೆ ಸಿ ಎಸ್ ಅರ್ ಒತ್ತು ನೀಡಿತ್ತು.




Duke SANFORD | DCID
Advancing international development policy & practice

ಅಮೇರಿಕದ ಡ್ಯೂಕ್ ವಿಶ್ವವಿದ್ಯಾನಿಲಯದಲ್ಲಿ ಸಕಾಲ ಅಧಿನಿಯಮದ ಬಗ್ಗೆ ವಿವರಿಸುತ್ತಿರುವ ಡಾ॥ಶಾಲಿನಿ ರಜನೀಶ್ ಸಕಾಲ ಮಿಷನ್ ನಿರ್ದೇಶಕರು

ಆರ್ಟ್ ೯ ಆಫ್ ಲಿವಿಂಗ್ – ಬೆಂಗಳೂರಿನಲ್ಲಿ ನಡೆದ ಅಂತರ್ **ರಾಷ್ಟ್ರೀಯ ಮಹಿಳಾ ಕಾರ್ಯಾಗಾರದಲ್ಲಿ** ಡಾ॥ಶಾಲಿನಿ ರಜನೀಶ್, ಮಿಷನ್ ನಿರ್ದೇಶಕರು




ಚಂದನ ವಾಹಿನಿಯಲ್ಲಿ ದಿನಾಂಕ 12/02/14 ರಂದು ಬೆಳಗ್ಗೆ 8.00 ಗಂಟೆಯಿಂದ 9.00 ಗಂಟೆವರೆಗೆ ಸಕಾಲದ ಬಗ್ಗೆ ನೇರ ಫೋನ್–ಇನ್ ಕಾರ್ಯಕ್ರಮದಲ್ಲಿ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಭಾಗವಹಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಂದ ಸಕಾಲದ ಬಗ್ಗೆ ಮಾಹಿತಿ, ಅಭಿಪ್ರಾಯ, ಅಹವಾಲು ಹಾಗೂ ದೂರುಗಳನ್ನು ಹಂಚಿಕೊಂಡಿರುತ್ತಾರೆ. ಈ ರೀತಿ ಕರೆ ಮಾಡಿದ ನಾಗರಿಕರ ಕೆಲವು ವಿವರಗಳು ಕೆಳಗಿನಂತಿವೆ.

| ಕ್ರ. ಸಂ. | **ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ** | **ದೂರು/ಮನವಿ** |
|---|---|---|
| 1 | ಸಂಗಮೇಶ್ ಎಚ್.ಹೂಗಾರ್<br>ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ | ನಮ್ಮ ದೊಡ್ಡಪ್ಪನವರಾದ ಶ್ರೀ ಸಿದ್ದಪ್ಪ ಬೀಮಪ್ಪ ಜೀರ್ ರವರಿಗೆ ಬಸವನಬಾಗೇವಾಡಿ ತಾಲ್ಲೂಕು ಇಟಗಿ ಗ್ರಾಮದಲ್ಲಿ ಸ.ನಂ.9/4 ರಲ್ಲಿ 4.13 ಗುಂಟೆ ಜಮೀನು ಇದೆ. ಸದರಿ ಜಮೀನಿನ ಪಹಣಿಯಲ್ಲಿ ಹಕ್ಕುಗಳ ಕಾಲಂನಲ್ಲಿ ಕಮಿಷನರ್ ಆದೇಶ ರದ್ದು ಮಾಡದ ಹೊರತು ಹಸ್ತಾಂತರ ಮಾಡಬಾರದು ಎಂದು ನಮೂದಿಸಿದೆ. ಇದನ್ನು ರದ್ದು ಮಾಡುವಂತೆ ಕೋರಿ ಎಲ್ಲಾ ದಾಖಲೆಗಳೊಂದಿಗೆ ದಿ: 11.05.2012 ರಂದು ತಹಸೀಲ್ದಾರ್ ಕಛೇರಿಗೆ ಅರ್ಜಿ ನೀಡಿದ್ದು ಯಾವುದೇ ಕ್ರಮ ಕೈಗೊಳ್ಳದೇ ಮುಕ್ತಾಯ ಮಾಡಿರುತ್ತಾರೆ. ನಂತರ ದಿನಾಂಕ 10/09/2013 ರಂದು ಮತ್ತುಮ್ಮೆ ಅರ್ಜಿ ಸಲ್ಲಿಸಿದ್ದರೂ ಸಹ ಇದುವರೆಗೂ ಕ್ರಮ ಕೈಗೊಂಡಿಲ್ಲವೆಂದು ದೂರಿರುತ್ತಾರೆ.<br>– ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಸಲಾಗಿದೆ |

| | | |
|---|---|---|
| 2 | ಪ್ರದೀಪ<br>ಆಲೂರು ತಾಲ್ಲೂಕು<br>ಹಾಸನ ಜಿಲ್ಲೆ. | ಇವರು ಕರೆ ಮಾಡಿ ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಕವಳಕೆರೆ ಗ್ರಾಮದಲ್ಲಿನ ನ್ಯಾಯಬೆಲೆ ಅಂಗಡಿಯನ್ನು ಮೊದಲು ಬೇರೆಯವರು ನಡೆಸುತ್ತಿದ್ದರು. ನಂತರ ತಾನು ಅಂಗವಿಕಲ ಕೋಟಾದಡಿ ನ್ಯಾಯಬೆಲೆ ಅಂಗಡಿಯನ್ನು ನಡೆಸಲು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರ ಮೇರೆಗೆ ಜಿಲ್ಲಾಧಿಕಾರಿಗಳು ಅನುಮತಿ ನೀಡಿದ್ದು, ಅದರಂತೆ ಅಂಗಡಿ ನಡೆಸುತ್ತಿದ್ದೇನೆ. ಆದರೆ ಸದರಿ ನ್ಯಾಯಬೆಲೆ ಅಂಗಡಿಯು ತನ್ನ ಹೆಸರಿಗೆ ನೋಂದಣಿಯಾಗದೇ ಮೊದಲು ನಡೆಸುತ್ತಿದ್ದವರ ಹೆಸರಿನಲ್ಲೇ ಇರುತ್ತದೆ. ಇದನ್ನು ಬದಲಾವಣೆ ಮಾಡಿಕೊಡುವಂತೆ 3-4 ತಿಂಗಳ ಹಿಂದೆ ಜಿಲ್ಲಾಧಿಕಾರಿ ಕಛೇರಿಗೆ ಮನವಿ ಮಾಡಿಕೊಂಡಿದ್ದು, ಇದುವರೆಗೂ ಕ್ರಮ ತೆಗೆದುಕೊಂಡಿಲ್ಲವೆಂದು ತಿಳಿಸಿರುತ್ತಾರೆ.<br>– |
| 4 | ಚಂದ್ರಶೇಖರ್. ಸಿ<br>ಬೇಲೂರು ತಾಲ್ಲೂಕು<br>ಹಾಸನ ಜಿಲ್ಲೆ. | 2012-13ನೇ ಸಾಲಿನಲ್ಲಿ ಚಂದನಹಳ್ಳಿ ಗ್ರಾಮದ ಸ.ನಂ.88 ರ 1.26 ಗುಂಟೆ ಜಮೀನನ್ನು (ಪಿತ್ರಾರ್ಜಿತ ಆಸ್ತಿ) ಸಹೋದರರಿಬ್ಬರು ವಿಭಾಗ ಮಾಡಿಕೊಂಡಿದ್ದೇವೆ. ಆದರೆ ಪಹಣಿಯಲ್ಲಿ ಒಟ್ಟಿಗೆ ಹೆಸರು ಬಂದ ಕಾರಣ, ಇದನ್ನು ಸರಿಪಡಿಸಿಕೊಡುವಂತೆ ಬೇಲೂರು ತಹಸೀಲ್ದಾರ್ ಕಛೇರಿಗೆ ಕೇಳಲಾಗಿ ಅವರು ಆಕಾರ್ ಬಂದ್ ಮತ್ತು ಎಡಬಲ ನಕಲುಗಳನ್ನು ನೀಡಿದರೆ ಸರಿಪಡಿಸಲಾಗುವುದೆಂದು ತಿಳಿಸಿದರು. ಅದರಂತೆ ತಾನು ಸಕಾಲ ಅಡಿಯಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ನಂತರ ತನಗೆ ಆಕಾರ್ ಬಂದ್ ಪ್ರತಿಯನ್ನು ಒದಗಿಸಿ ಎಡಬಲ ನಕಲು ಇನ್ನು ಸಿದ್ಧವಾಗಿಲ್ಲವೆಂದು ತಿಳಿಸಿ ಪ್ರತಿಯನ್ನು ನೀಡಿರುವುದಿಲ್ಲ. ನಂತರ ವಿಚಾರಿಸಲಾಗಿ ಸದರಿ ಕಛೇರಿಯ ರಂಗಸ್ವಾಮಿ ಎನ್ನುವವರು ಯಾವುದೇ ಮಾಹಿತಿ ನೀಡುತ್ತಿಲ್ಲ ಹಾಗೂ ಎಡಬಲ ನಕಲು ಪ್ರತಿಯನ್ನು ಸಹ ನೀಡುತ್ತಿಲ್ಲವೆಂದು ತಿಳಿಸಿರುತ್ತಾರೆ.<br>– ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗಿದೆ |
| 5 | ಲತಾ<br>ಖಾಜುಭಾಗ್, ಕಾರವಾರ. | ಸುಮಾರು 30 ವರ್ಷಗಳ ಹಿಂದೆ ಖರೀದಿ ಮಾಡಿದ ನಿವೇಶನ ಸಂಬಂಧ ತಾಯಿ-ಮಗ ಸಹಿ ಮಾಡಿದ್ದು, ಇನ್ನೊಬ್ಬ ಮಗ ಸಹಿ ಮಾಡಿರುವುದಿಲ್ಲ. ಇದು ನಮಗೆ ಗೊತ್ತಿಲ್ಲದೇ ಅವರಿಂದ ಖರೀದಿಸಿದ ನಿವೇಶನದಲ್ಲಿ ಮನೆ ಕಟ್ಟಿ ವಾಸ ಮಾಡಲು ಪ್ರಾರಂಭ ಮಾಡಿದ ಕೆಲವೇ ತಿಂಗಳುಗಳಲ್ಲಿ ಸಹಿ ಮಾಡದ ಅವರ ಮಗ ಬಂದು ಗಲಾಟೆ ಮಾಡಿ ಧಮಕಿ ಹಾಕಿ ನಮ್ಮನ್ನು ಮನೆಯಿಂದ ಖಾಲಿ ಮಾಡಿಸಿರುತ್ತಾರೆ. ಈ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದ್ದು, ಇನ್ನೂ ನಡೆಯುತ್ತಾ ಇರುತ್ತದೆ. ಈ ಮಧ್ಯದಲ್ಲಿ ಅವರು ನ್ಯಾಯಾಲಯದ ಅನುಮತಿ ಪಡೆದು ನಾವು ಕಟ್ಟಿದ ಮನೆಯಲ್ಲೇ ಇಲ್ಲಿಯವರೆವಿಗೂ ವಾಸ ಮಾಡುತ್ತಿದ್ದಾರೆ. ಆದರೆ ನಾವು ಬೇರೆ ಕಡೆ ಬಾಡಿಗೆಗೆ ವಾಸವಿರುತ್ತೇವೆ. ನಾವು ತುಂಬಾ ಬಡವರಿದ್ದು ಜೀವನ ನಿರ್ವಹಣೆಯೇ ಕಷ್ಟಕರವಾಗಿರುವಾಗ, ನ್ಯಾಯಾಲಯ ಪ್ರಕರಣ ಸಂಬಂಧ ವಕೀಲರುಗಳಿಗೆ ನೀಡಬೇಕಿರುವ ಹಣವನ್ನು ಹೊಂದಿಸಲು ನಮಗೆ ಸಾಧ್ಯವಾಗುವುದಿಲ್ಲ. ಈ ಸಂಬಂಧ ತಮಗೆ ಸಹಾಯ ಮಾಡಬೇಕೆಂದು ಕೋರಿರುತ್ತಾರೆ. |
| 6 | ಸ್ಟಾಲಿನ್ ಜೋಸೆಫ್<br>ಹೆಚ್.ಎ.ಎಲ್., ಬೆಂಗಳೂರು | ಇವರು ಕರೆ ಮಾಡಿ, ತಮ್ಮ ನಾದಿನಿಯ ಸಹಾಯದಿಂದ ಅವರ ಹೆಸರಿನಲ್ಲಿ ಲೋನ್ ಮಾಡಿ ವಾಹನ ಖರೀದಿಸಿ 2008ರಲ್ಲಿ ವಾಹನವನ್ನು ಪ್ರವಾಸೋದ್ಯಮ ಇಲಾಖೆಗೆ ನೀಡಲಾಗಿದೆ. ಸದರಿ ವಾಹನಕ್ಕೆ ನಾನೇ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಸದರಿ ವಾಹನವು ವಿಮಾನ ನಿಲ್ದಾಣ ಮತ್ತು ನಗರಕ್ಕೆ ಸಂಚರಿಸುತ್ತದೆ. ಆದರೆ ಪ್ರಸ್ತುತ, ಇಲಾಖೆಯು 5 ವರ್ಷದ ನಂತರ ವಾಹನವನ್ನು ಬದಲಾಯಿಸಬೇಕೆಂದು ತಮ್ಮ ನಾದಿನಿಯ ಹೆಸರಿಗೆ ಪತ್ರ ನೀಡಲಾಗಿದೆ. ಪ್ರಸ್ತುತ ಇವರು ಆಸ್ಟ್ರೇಲಿಯಾದಲ್ಲಿ ವಾಸ ಮಾಡುತ್ತಿದ್ದು, ಅವರು ನನ್ನ ಹೆಸರಿಗೇ ಜಿಪಿಎ ಮಾಡಿ, ಪತ್ರವನ್ನೂ ಸಹ ನನ್ನ ಹೆಸರಿಗೆ ಕೊಡಬೇಕೆಂದು |

| | | |
|---|---|---|
| | | ನಿರ್ದೇಶಕರಿಗೆ ಮನವಿ ಮಾಡಿಕೊಂಡಿರುತ್ತಾರೆ. ಆದರೆ ಇಲಾಖೆಯವರು ಇದನ್ನು ಒಪ್ಪುತ್ತಿಲ್ಲ. ಇದರಿಂದಾಗಿ ತನಗೆ ತೊಂದರೆಯಾಗುತ್ತದೆ, ಕಾರಣ ನನ್ನ ಹೆಸರಿಗೆ ಪತ್ರ ನೀಡದಿದ್ದರೆ ಬ್ಯಾಂಕ್‌ನಲ್ಲಿ ಸಾಲ ಮಾಡಲು ಆಗುವುದಿಲ್ಲ. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸಿ ಸಹಾಯ ಮಾಡಬೇಕೆಂದು ಕೋರಿರುತ್ತಾರೆ. |
| 7 | ವಿಜಯ ಮಹಂತೇಶ್ ಸಂಗಮ್<br>ಬಸವನಬಾಗೇವಾಡಿ,<br>ಬಿಜಾಪುರ ಜಿಲ್ಲೆ. | ಇವರು ಕರೆ ಮಾಡಿ ತಾವು 2000ನೇ ಇಸವಿಯಲ್ಲಿ ಮನಗೂಳ ಗ್ರಾಮದ ಸ.ನಂ. 2012 ರಲ್ಲಿ 7 ಎಕರೆ ಜಮೀನು ಖರೀದಿ ಮಾಡಿರುತ್ತೇವೆ. ಆದರೆ ಈ ಜಮೀನಿಗೆ ಹೋಗಲು ರಸ್ತೆ ಸಂಪರ್ಕ ಇರುವುದಿಲ್ಲ. ನಮ್ಮ ಜಮೀನು ಪಕ್ಕದಲ್ಲಿರುವ ಜಮೀನಿನ ಮುಖಾಂತರವೇ ಹೋಗಬೇಕಾಗಿದ್ದು, ಅವರು ಓಡಾಡಲು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದ್ದರಿಂದ ರಸ್ತೆ ಸಂಪರ್ಕ ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ.<br>– ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗಿದೆ |
| 8 | ಶ್ರೀನಿವಾಸ್<br>(ವಿಳಾಸ ನೀಡಿರುವುದಿಲ್ಲ) | ಇವರು ಕರೆ ಮಾಡಿ, ದೊಡ್ಡಬೊಮ್ಮಸಂದ್ರದಲ್ಲಿ ರಾಘವೇಂದ್ರ ಸ್ಟೋರ್ ಎಂಬ ನ್ಯಾಯಬೆಲೆ ಅಂಗಡಿ ಇದ್ದು (ಬಿ.ಎಲ್. ನಂ. 92, ಬೆಂಗಳೂರು ಉತ್ತರ ವಲಯ ಐ.ಆರ್.ಎ, ಬೆಂ–97) ಈ ಡಿಪೋನಲ್ಲಿ ಶ್ರೀರಾಮ್ ಕೋಂ ಅಂಬಿಕಾ ಎಂಬುವವರು ಬಿ.ಪಿ.ಎಲ್. ಕಾರ್ಡ್ ಹೊಂದಿರುತ್ತಾರೆ. ಆದರೆ ಇವರು ಎರಡು ಸ್ವಂತ ಕಟ್ಟಡಗಳನ್ನು ಹೊಂದಿದ್ದು, ಇನ್ನೊಂದು ಭವ್ಯವಾದ ಮನೆಯನ್ನು ಕಟ್ಟಿಸುತ್ತಿದ್ದು, 2 ಗ್ಯಾಸ್‌ಗಳನ್ನು ಹೊಂದಿದ್ದು, ಸುಮಾರು 25,000 ರೂಗಳು ಬಾಡಿಗೆ ರೂಪದಲ್ಲಿ ಆದಾಯ ಬರುತ್ತಿದ್ದರೂ ಇವರು ಬಿಪಿಎಲ್ ಕಾರ್ಡ್‌ನ್ನು ಹೊಂದಿರುತ್ತಾರೆಂದು ದೂರಿರುತ್ತಾರೆ. ಅಲ್ಲದೇ ಈ ಡಿಪೋನಲ್ಲಿ ಇದೇ ರೀತಿ ಸುಮಾರು 90 ರಷ್ಟು ಶ್ರೀಮಂತ ಜನರು ಬಿ.ಪಿ.ಎಲ್. ಕಾರ್ಡ್‌ನ್ನು ಹೊಂದಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆಂದು ತಿಳಿಸಿ, ಅರ್ಹ ಬಡವರಿಗೆ ಬಿಪಿಎಲ್ ಕಾರ್ಡ್ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ |
| 9 | ಸಂಜೀವ್<br>ಟೇಕಲ್ ಅಂಚೆ, ಮಾಲೂರು<br>ತಾಲ್ಲೂಕು, ಕೋಲಾರ ಜಿಲ್ಲೆ. | 1991 ರಲ್ಲಿ ಮಂಡಲ ಪಂಚಾಯ್ತಿಯು ಗ್ರಾಮಠಾಣಾ ವ್ಯಾಪ್ತಿಯಲ್ಲಿ ನಿವೇಶನ ಖಾಲಿ ಇಲ್ಲದಿದ್ದರಿಂದ ಗುಂಡ್ಲಹಳ್ಳಿಯ ಸರ್ವೆ ನಂ.66 ರಲ್ಲಿನ ಗೋಮಾಳದಲ್ಲಿ ನಿವೇಶನ ಮಂಜೂರು ಮಾಡಿರುತ್ತಾರೆ. ನಾವು ಮನೆಯನ್ನು ಕಟ್ಟಲು ಮಂಡಲ ಪಂಚಾಯ್ತಿಯಿಂದ ಅನುಮತಿ ಪಡೆದ ನಂತರ ಪಾಯವನ್ನು ಹಾಕಿದಾಗ ಕುಟುಂಬದ ಆರ್ಥಿಕ ಸಮಸ್ಯೆಯಿಂದ ಮನೆ ಸಂಪೂರ್ಣಗೊಳ್ಳದೇ ಇಲ್ಲಿಯವರೆಗೂ ಹಾಗೇಯೇ ಇರುತ್ತದೆ. ಆದರೆ ಪ್ರಸ್ತುತ, ಗ್ರಾಮದ ಸುಮಾರು 20–25 ಜನರು ನಿವೇಶನ ಸಂಬಂಧ ಸುಖಾಸುಮ್ಮನೆ ಗ್ರಾಮಪಂಚಾಯ್ತಿಗೆ ದೂರು ನೀಡಿ ಅದು ಗೋಮಾಳ ಜಮೀನಾಗಿದ್ದು, ಅಲ್ಲಿ ಶಾಲೆ ಅಥವಾ ಇನ್ನಿತರೆ ಗ್ರಾಮ ಉಪಯೋಗಕ್ಕೆ ಜಾಗ ಬೇಕೆಂದು ತಿಳಿಸಿ ನೀಡಿರುವ ನಿವೇಶನವನ್ನು ರದ್ದುಗೊಳಿಸುವಂತೆ ಅರ್ಜಿ ನೀಡಿರುತ್ತಾರೆ. ಈ ಸಂಬಂಧ ಪಂಚಾಯ್ತಿಯು ನಿವೇಶನ ರದ್ದು ಮಾಡಲು ಕಾರ್ಯನಿರ್ವಹಣಾಧಿ ಕಾರಿಗಳಿಗೆ ಪತ್ರ ಬರೆದಿದ್ದಾರೆ. ಈ ಸಂಬಂಧ ಸದರಿಯವರು ನಿವೇಶನದ ಸರ್ವೆ ಮಾಡಿಸುತ್ತಿದ್ದು, ಎಲ್ಲಿ ರದ್ದಾಗುತ್ತದೋ ಎಂಬ ಭಯ ಕಾಡುತ್ತಿದ್ದು, ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.<br>– ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗಿದೆ |

ಚಂದನ ವಾಹಿನಿಯಲ್ಲಿ ದಿನಾಂಕ 26/02/14 ರಂದು ಬೆಳಗ್ಗೆ 8.00 ಗಂಟೆಯಿಂದ 9.00 ಗಂಟೆವರೆಗೆ ಸಕಾಲದ ಬಗ್ಗೆ ನೇರ ಫೋನ್-ಇನ್ ಕಾರ್ಯಕ್ರಮದಲ್ಲಿ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಭಾಗವಹಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಕಾಲದ ಬಗ್ಗೆ ಮಾಹಿತಿ, ಅಭಿಪ್ರಾಯ, ಅಹವಾಲು ಹಾಗೂ ದೂರುಗಳನ್ನು ಹಂಚಿಕೊಂಡಿರುತ್ತಾರೆ. ಈ ರೀತಿ ಕರೆ ಮಾಡಿದ ನಾಗರಿಕರ ಕೆಲವು ವಿವರಗಳು ಕೆಳಗಿನಂತಿವೆ.

| ಕ್ರ. ಸಂ. | ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ | ದೂರು/ಮನವಿ |
|---|---|---|
| 1 | ಅಲ್ಲಾಸಾಬ್ ಹಂಚಿನಾಳ<br>ಗದಗ್ ಜಿಲ್ಲೆ. | ಇವರು ಪಡಿತರ ಚೀಟಿಗಾಗಿ ದಿನಾಂಕ 20/06/2013 ರಂದು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿದ್ದು (ಸಂಖ್ಯೆ: 201781651) ಈವರೆಗೂ ಪಡಿತರ ಚೀಟಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ.<br>-ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗಿದೆ |
| 2 | ದಾವಲ್‌ಬಿ ಅರುಂಧತಿ ಬಾಗೇವಾಡಿ<br>ಗದಗ. | 2000 ರಲ್ಲಿ ತನ್ನ ಪತಿಯು ತೀರಿಕೊಂಡಿದ್ದು, ತಾನು ಮುಂಡರಗಿ ಉಪ ತಹಸೀಲ್ದಾರ್ ಕಛೇರಿಯಲ್ಲಿ ಪತಿ ತೀರಿಕೊಂಡಾಗ ರಾಷ್ಟ್ರೀಯ ಕುಟುಂಬ ನಿರ್ವಹಣಾ ಯೋಜನೆ ಅಡಿಯಲ್ಲಿ ನೀಡುತ್ತಿದ್ದ ರೂ.10,000/-ಗಳ ಹಣವನ್ನು ನೀಡಬೇಕೆಂದು 2012 ರಲ್ಲಿ ಕೇಳಲಾಗಿ, ಅವರು ಈ ಯೋಜನೆಯು 2001 ರಲ್ಲೇ ಸ್ಥಗಿತಗೊಂಡಿದೆ ಎಂದು ತಿಳಿಸಿದರು. ಈ ಯೋಜನೆಯನ್ನು ಮುಂದುವರೆಸಿದರೆ ನಮ್ಮಂಥ ಬಡವರಿಗೆ ಅನುಕೂಲವಾಗುತ್ತದೆ ಎಂದು ಮತ್ತು ತನಗೆ ಹಣವನ್ನು ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ. |
| 3 | ಮಾಲತೇಶ ಆಚಾರ್ ಬಡಿಗೇರ್<br>ಹರಿಹರ,<br>ದಾವಣಗೆರೆ ಜಿಲ್ಲೆ | ಇವರು ಕರೆ ಮಾಡಿ, ಪಡಿತರ ಚೀಟಿಗಾಗಿ ನವೆಂಬರ್ ಮಾಹೆಯಲ್ಲಿ ಹರಿಹರ ತಾಲ್ಲೂಕು ಕಛೇರಿಗೆ ಅರ್ಜಿ ಸಲ್ಲಿಸಲಾಗಿದ್ದು, ಈವರೆವಿಗೂ ಪಡಿತರ ಚೀಟಿ ನೀಡಿರುವುದಿಲ್ಲ ಹಾಗೂ ಈ ಬಗ್ಗೆ ವಿಚಾರಿಸಿದರೆ ಕಛೇರಿಯವರೂ ಯಾವುದೇ ಸ್ಪಂದನೆ ಮಾಡುತ್ತಿಲ್ಲವೆಂದು ದೂರಿರುತ್ತಾರೆ.<br>-ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗಿದೆ |
| 4 | ಪ್ರಭು | ಇವರು ಕರೆ ಮಾಡಿ ಅಡುಗೆ ಅನಿಲ ವಿತರಣೆ ಸೇವೆಯನ್ನು ಸಹ ಸಕಾಲ ಅಧಿನಿಯದಲ್ಲಿ ಸೇರಿಸಿದರೆ ನಾಗರಿಕರಿಗೆ ತುಂಬಾ ಅನುಕೂಲವಾಗುತ್ತದೆಂದು ಸಲಹೆ ನೀಡಿರುತ್ತಾರೆ. |
| 5 | ಸೋಮನಾಥ | ಇವರು ಕರೆ ಮಾಡಿ ಸಕಾಲ ಹಲೋ ಗೆಳೆಯರೆ ಕಾರ್ಯಕ್ರಮ ಉತ್ತಮವಾಗಿ ಮೂಡಿಬರುತ್ತಿರುವುದಾಗಿ ಮೆಚ್ಚುಗೆ ವ್ಯಕ್ತಪಡಿಸಿ, ಕಳೆದ ವರ್ಷ ಜುಲೈನಲ್ಲಿ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿದ್ದು, ಇದುವರೆಗೂ ಪಡಿತರ ಚೀಟಿ ನೀಡಿರುವುದಿಲ್ಲವೆಂದು ತಿಳಿಸಿದರು.<br><br>(ಈ ಬಗ್ಗೆ ಅರ್ಜಿದಾರರಿಗೆ ದೂರವಾಣಿ ಮೂಲಕ ಮತ್ತೊಮ್ಮೆ ತಮ್ಮ ದೂರಿನ ಬಗ್ಗೆ ವಿಚಾರಿಸಲಾಗಿ, ಅವರು ಈ ದಿನ ಪಡಿತರ ಚೀಟಿ ತನಗೆ ದೊರೆತಿದ್ದು, ದೂರು ನಿವಾರಣೆ ಆಗಿರುತ್ತದೆಂದು ತಿಳಿಸಿದರು) |
| 6 | ನಾಗರಾಜ್<br>ಬೆಂಗಳೂರು | ಇವರು ಪಡಿತರ ಚೀಟಿಗಾಗಿ ದಿನಾಂಕ 03/07/2013 ರಂದು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿದ್ದು (ಸಂಖ್ಯೆ: 202330242) ಈವರೆಗೂ ಪಡಿತರ ಚೀಟಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ.<br>-ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗಿದೆ |
| 7 | ಪಂಚಾಕ್ಷರಿ<br>ಚಿಕ್ಕನಾಯಕನಹಳ್ಳಿ (ತಾ),<br>ತುಮಕೂರು ಜಿಲ್ಲೆ | ಇವರು ಕರೆ ಮಾಡಿ, ಪಿನ್ನೇನಹಳ್ಳಿ ಗ್ರಾಮದ ಸರ್ವೆ ನಂ.46 ರಲ್ಲಿ 5 ಎಕರೆ ಪಿತ್ರಾರ್ಜಿತವಾಗಿ ತಮಗೆ ಬಂದಿದ್ದು, ನಾವು 4 ಜನ ಸಹೋದರರು ಭಾಗ ಮಾಡಿಕೊಂಡಿರುತ್ತೇವೆ. ಪ್ರಸ್ತುತ ಜಮೀನನ್ನು ಮಾರಾಟ ಮಾಡುವ ಸಂಬಂಧ ಚಿಕ್ಕನಾಯಕನಹಳ್ಳಿ ತಹಸೀಲ್ದಾರ್ ಕಛೇರಿಗೆ ನಕಾಶೆ (ಸ್ಕೆಚ್) |

| | | |
|---|---|---|
| | | ಮಾಡಿಕೊಂಡುವಂತೆ ಕೋರಲಾಗಿದ್ದು, ಸುಮಾರು ಒಂದೂವರೆ ವರ್ಷವಾದರೂ ಮಾಡಿಕೊಟ್ಟಿಲ್ಲ. ಕಛೇರಿಯಲ್ಲಿ ವಿಚಾರಿಸಲಾಗಿ ಟಿಪ್ಪಣಿಯಲ್ಲಿ ನಮ್ಮ ಜಮೀನು 3 ಎಕರೆ 34 ಗುಂಟೆ ಎಂದಿರುತ್ತದೆ. ಆದರೆ ಪಹಣಿಯಲ್ಲಿ, ಇತರೆ ದಾಖಲೆಗಳಲ್ಲಿ ಸರಿಯಿರುತ್ತದೆ. ಆದ್ದರಿಂದ ಟಿಪ್ಪಣಿಯಲ್ಲಿ ಸರಿಪಡಿಸಿ ತಮಗೆ ಸ್ಕೆಚ್ ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ.<br>-ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗಿದೆ |
| 8 | ಸತ್ಯನಾರಾಯಣ್ | ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನ ಶಿರವಂತೆ ಗ್ರಾಮಸ್ಥರೊಬ್ಬರು ಕರೆ ಮಾಡಿ ಆಶ್ರಯ ಯೋಜನೆ ಅಡಿಯಲ್ಲಿ ಮಂಜೂರಾದ ಮನೆಗಳ ನಿರ್ಮಾಣದ ವೆಚ್ಚದ ಹಣವನ್ನು ಮಂಜೂರು ಮಾಡಲು ಪ್ರತಿ ಹಂತದ ಬಿಲ್‌ಗಳನ್ನು ಪಾಸ್ ಮಾಡಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪ್ರಭುರವರು ಲಂಚವನ್ನು ತೆಗೆದುಕೊಳ್ಳುತ್ತಾರೆಂದು ದೂರಿರುತ್ತಾರೆ. |
| 9 | ದುರ್ಗಯ್ಯ<br>ಚಿಕ್ಕನಾಯಕನಹಳ್ಳಿ,<br>ತುಮಕೂರು ಜಿಲ್ಲೆ. | ಇವರು ಕರೆ ಮಾಡಿ, ಅಂದನ ಕೆರೆ ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ. ಈ ಬಗ್ಗೆ 2 ತಿಂಗಳ ಹಿಂದೆ ಕಾರ್ಯನಿರ್ವಹಣಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನ ಆಗಿಲ್ಲ. ಹಾಗೂ ಸಮಸ್ಯೆ ಕುರಿತು ಪ್ರತಿಭಟನೆಗಳು ಮಾಡಿದರೂ ಕೂಡ ನೀರಿನ ಬವಣೆಯನ್ನು ತಪ್ಪಿಸಿರುವುದಿಲ್ಲವೆಂದು ದೂರಿರುತ್ತಾರೆ.<br>(ಮಾನ್ಯ ಸಚಿವರು ಕರೆಗೆ ಸ್ಪಂದಿಸಿ, ಭದ್ರಾ ಮೇಲ್ದಂಡೆ ಯೋಜನೆಗೆ ಅನುಮತಿ ನೀಡಲಾಗುವುದು. ಒಂದು ಹಂತದಲ್ಲಿ ಕೆಲಸ ಈಗಾಗಲೇ ಪ್ರಾರಂಭವಾಗಿದ್ದು, ತುಮಕೂರು ನಾಲೆ ಬಂದಾಗ ಕೆರೆಗೆ ನೀರು ಬಂದು ಸಮಸ್ಯೆ ಬಗೆಹರಿಯುವುದೆಂದು ತಿಳಿಸಿದರು) |
| 10 | ರಾಘವೇಂದ್ರ ಎಸ್<br>ಸಂಡೂರು ತಾಲ್ಲೂಕು,<br>ಬಳ್ಳಾರಿ ಜಿಲ್ಲೆ – 583128 | ಇವರು ಕರೆ ಮಾಡಿ, ತಾನು ಕಂಪ್ಯೂಟರ್ ಆಪರೇಟರ್ ಆಗಿ ಗೊಲ್ಲಲಿಂಗಮ್ಮನಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದು, 6 ತಿಂಗಳಿನಿಂದ ವೇತನವನ್ನು ನೀಡಿರುವುದಿಲ್ಲ. ಮತ್ತು ಹಿಂದಿನ ವೇತನದಿಂದ ಕಟಾಯಿಸಿದ ಪಿ.ಎಫ್ ಮತ್ತು ಇ.ಎಸ್.ಐ. ಮೊತ್ತವನ್ನು ಪಾವತಿಸಿರುವುದಿಲ್ಲ. ಇದೇರೀತಿ ತನ್ನಂತೆ ಇತರೆ 16 ಜನರಿಗೂ ಸಹ ವೇತನ ನೀಡಿರುವುದಿಲ್ಲ. ಈ ಬಗ್ಗೆ ಕಾರ್ಯನಿರ್ವಹಣಾಧಿಕಾರಿಯವರಿಗೆ ಮನವಿ ಸಲ್ಲಿಸಲಾಗಿ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ತಮಗೆ ವೇತನ ಮತ್ತು ಬರಬೇಕಾದ ಬಾಕಿ ಮೊತ್ತವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ. |
| 11 | ಕುಮಾರ್<br>ಹುನಗುಂದ (ತಾ), ಬಾಗಲಕೋಟೆ ಜಿಲ್ಲೆ | ಇವರು ಕರೆ ಮಾಡಿ, ಬಾಗೇಪಲ್ಲಿ ತಾಲ್ಲೂಕು ದೊಡ್ಡಪಲ್ಲಿ ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ. ಈ ಬಗ್ಗೆ 10 ತಿಂಗಳ ಹಿಂದೆ ಸೋಮನಾಥಪುರ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಕಛೇರಿಗೆ ಸಕಾಲ ಅಡಿಯಲ್ಲಿ ಕುಡಿಯುವ ನೀರಿನ ನಿರ್ವಹಣೆ ಮಾಡುವ ಬಗ್ಗೆ ಅರ್ಜಿ ಸಲ್ಲಿಸಿದೆ. ಸದರಿ ಕಛೇರಿಯವರು ಅಂತರ್ಜಾಲ ವ್ಯವಸ್ಥೆ ಇಲ್ಲದ ಕಾರಣ 3 ಡಿಜಿಟ್‌ನ ಸಂಖ್ಯೆ ನೀಡಿರುತ್ತಾರೆ. ನಂತರ ಈ ಸಮಸ್ಯೆಯನ್ನು ಸುಮಾರು 7/8 ತಿಂಗಳ ನಂತರ ಪರಿಹರಿಸಿರುತ್ತಾರೆ. ಸಮಸ್ಯೆ ನಿವಾರಣೆಯಾದ ಬಗ್ಗೆ ಸಕಾಲ ಕಾಲ್‌ಸೆಂಟರ್‌ನವರು ಮಾಹಿತಿಯನ್ನು ತಿಳಿಸಿರುತ್ತಾರೆ. ಆದರೆ ವಿಳಂಬವಾಗಿ ಸೇವೆ ಸಲ್ಲಿಸಿರುವ ಕಾರಣ ಪಂಚಾಯತ್ ಅಭಿವೃದ್ಧಿ ಕಛೇರಿಯವರಿಂದ ತನಗೆ ಪರಿಹಾರ ವೆಚ್ಚವನ್ನು ದೊರಕಿಸಿಕೊಡಬೇಕಾಗಿ ಕೋರಿರುತ್ತಾರೆ. |
| 12 | ನಾಗರಾಜ್ ವಿಠಲ್‌ಕರ್<br>ನವಲಗುಂದ (ತಾ),<br>ಧಾರವಾಡ ಜಿಲ್ಲೆ. | ಇವರು ಕರೆ ಮಾಡಿ, ತಾನು 2009 ರಲ್ಲಿ ಭಾಗ್ಯಲಕ್ಷ್ಮಿ ಬಾಂಡ್‌ಗಾಗಿ ನವಲಗುಂದ ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ಆದರೆ ಸುಮಾರು 4 ವರ್ಷಗಳಾದರೂ ಸಹ ತನಗೆ ಇನ್ನೂ ಬಾಂಡ್ ದೊರೆತಿಲ್ಲವೆಂದು ದೂರಿರುತ್ತಾರೆ. |

# ಸಕಾಲ@ವರ್ಕ್

## ಸಕಾಲ ಜಾಗೃತಿ ಕಾರ್ಯಕ್ರಮ:

ದಿನಾಂಕ 3ನೇ ಫೆಬ್ರವರಿ 2014– ಧಾರವಾಡದಲ್ಲಿ ರಾಷ್ಟ್ರೋತ್ತಾನ ಸಂಕಲ್ಪ ಟ್ರಸ್ಟ ವತಿಯಿಂದ ಸಕಾಲ ಯಾತ್ರೆ ಕಾರ್ಯಕ್ರಮ: ಕೆ ಎನ್ ಹೆಚ್ ಪ್ರೌಢ ಶಿಕ್ಷಣ ಶಾಲೆಯಲ್ಲಿ ಬೆಳಗ್ಗೆ 11ರಿಂದ ಶುರುವಾದ ಈ ಕಾರ್ಯಕ್ರಮ 1ರವರೆಗೆ ನಡೆಯಿತು. ಈ ಕಾರ್ಯಕ್ರಮವನ್ನು ಟ್ರಸ್ಟ್ ನ ಸಂಪನ್ಮೂಲ ವ್ಯಕ್ತಿ ಶ್ರೀ ಸಂತೋಷ್ ಪಿ ನರಗುಂದ್ ರವರು ನಡೆಸಿಕೊಟ್ಟರು, ಶ್ರಿ ಶ್ರೀಕರ, ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು ಸಹ ಕಾರ್ಯಕ್ರಮವನ್ನು ನಡೆಸುವಲ್ಲಿ ಟ್ರಸ್ಟ್‌ಗೆ ಸಹಕರಿಸಿದರು. ಕಾರ್ಯಕ್ರಮದಲ್ಲಿ ಸುಮಾರು 250 ಮಕ್ಕಳು ಹಾಗೂ ಶಾಲಾ ಸಿಬ್ಬಂದಿಗಳು ಭಾಗವಹಿಸಿದ್ದರು, ಕಾರ್ಯಕ್ರಮದಲ್ಲಿ ಸಕಾಲ ಜಿಎಸ್‌ಸಿ ಸ್ವೀಕೃತಿ ಮಹತ್ವ, ಇಲಾಖೆಯ ಸಂಭಂದಿತ ಅಧಿಕಾರಿ, ಸಹಾಯ ಕೇಂದ್ರದ /ಕರೆ ಕೇಂದ್ರ, ಪರಿಹಾರ ಧನ ವಿವರಗಳನ್ನು ನೀಡಲಾಯಿತು,



ಇದೇ ದಿನ ಮಧ್ಯಾನ 3ರಿಂದ 4ರವರೆಗೆ ಮತ್ತೊಂದು ಶಾಲೆ (ಲ್ಯಾಮಿಂಗ್ ಟನ್ ಬಾಲಕಿಯರ ಪ್ರೌಢ ಶಾಲೆ)ಯಲ್ಲೂ ಸಕಾಲ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



<u>ದಿನಾಂಕ 8ನೇ ಫೆಬ್ರವರಿ 2014– </u>ಗುಲ್ಬಗಾದ ತಾಲ್ಲೂಕು ಪಂಚಾಯತಿ ಸಭಾ ಭವನದಲ್ಲಿ ಕೂಡ ರಾಷ್ಟ್ರೋತ್ತಾನ ಸಂಕಲ್ಪ ಟ್ರಸ್ಟ್ ರವರು ಸಕಾಲ ಜಾಗೃತಿ ಕಾರ್ಯಕ್ರಮ ಏರ್ಪಡಿಸಿದರು. ಆರ್ ಟಿ ಐ ಕ್ರಿಯಾತ್ಮ ಅಸೋಷಿಯನ್ , ಸಕಾಲ ಮಂಡಳಯ ಶ್ರೀ ವಿದ್ಯಾ, ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು ಕಾರ್ಯಕ್ರಮವನ್ನು ನಡೆಸುವಲ್ಲಿ ಟ್ರಸ್ಟ್‌ಗೆ ಸಹಕರಿಸಿದರು. ಕಾರ್ಯಕ್ರಮದಲ್ಲಿ 70 ಜನ ನಾಗರಿಕರು ಭಾಗವಹಿಸಿದ್ದರು, ನೆರೆದವರಲ್ಲಿ ಜಿಲ್ಲೆಯ ಪತ್ರಕರ್ತರು, ಉದ್ಯಮಿಗಳು , ಸಾಮಾಜಿಕ ಕಾರ್ಯಕರ್ತರು, ವಕೀಲರು,ಹಲವಾರು ಇಲಾಖೆಯ ಸರಕಾರಿ ಸಿಬ್ಬಂದಿಗಳು, ಹಿರಿಯ ನಾಗರಿಕರು ಉಪಸ್ಥಿತರಿದ್ದರು.

ಮಂಡಳಯ ಸಮಾಲೋಚಕರು ಸಕಾಲ ತಂತ್ರಾಂಶವನ್ನು ಬಳಸಿ ಹೇಗೆ ಸೇವೆಗಳನ್ನು ಪಡೆಯಬಹುದು ಎಂಬುದನ್ನು ನೆರೆದವರಿಗೆ ಮನವರಿಕೆ ಮಾಡಿಕೊಟ್ಟರು, ನೆರೆದಿದ್ದ ನಾಗರಿಕರು ಹಲವಾರು ಪ್ರಶ್ನೆಗಳಗೆ ಜಾಗೃತಿ ತಂಡವು ಉತ್ತರಿಸಿತು, ಸೇವೆ ಪಡೆದುಕೊಳ್ಳುವ ವಿಧಾನ, ಸಂಬಂಧಪಟ್ಟ ಅಧಿಕಾರಿಗಳು, ಬೈಪಾಸ್, ಸೂಚನ ಫಲಕ, ಜಾಗೃತಿ ಇತರೆ ವಿಷಯಗಳು ಪ್ರಶ್ನೆಯಲ್ಲಿ ಸೇರಿದ್ದವು










ಇದೇ ರೀತಿಯ ಕಾರ್ಯಕ್ರಮವನ್ನು ಗುಲ್ಬರ್ಗ ಜಿಲ್ಲೆಯ ಅಳಂದ್ (09.02.2014), ಉತ್ತರ ಕನ್ನಡದ ಹಳಿಯಾಳ್‌ನಲ್ಲೂ (18.2.2014) ಹಮ್ಮಿಕೊಳ್ಳಲಾಗಿತ್ತು, ಉತ್ತರ ಕನ್ನಡದ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕ ಶ್ರೀ ಗೋಪಾಲ್ ಕೇಣಿಕರ್ ಅವರು ಸಹ ಟ್ರಸ್ಟ್ ರವರ ಜಾಗೃತಿ ಕಾರ್ಯಕ್ರಮದಲ್ಲಿ ಸಹಕರಿಸಿದರು, ಜಾಗೃತಿ ಕಾರ್ಯಕ್ರಮದ ದೃಶ್ಯವನ್ನು ಇಲ್ಲಿ ಲಗತ್ತಿಸಲಾಗಿದೆ.






ತಾಲ್ಲೂಕು ಕಛೇರಿ ಸಭಾ ಭವನ ಹಳಿಯಾಳದಲ್ಲಿ ಸಕಾಲ ಜಾಗೃತಿ ಕಾರ್ಯಕ್ರಮ ದೃಶ್ಯ

ಇದೇ ಸಂದರ್ಭದಲ್ಲಿ ನೆರೆದಿದ್ದ ಎಲ್ಲರೂ  "ಸಕಾಲ ಸಂಕಲ್ಪ"ವನ್ನು ನೆರವೇರಿಸಿದರು.





**22ನೆ ಫೆಬ್ರವರಿ 2014ರಂದು** ಬೆಂಗಳೂರು ನಗರದಲ್ಲೂ ಸಕಾಲ ಜಾಗೃತಿ ಕಾರ್ಯಕ್ರಮನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ದೃಶ್ಯ. ಟ್ರಸ್ಟ್ ನ ಜೊತೆ ಮಂಡಳಿಯ ಜಿಲ್ಲ ತಂತ್ರಜ್ಞಾನ ಸಮಾಲೋಚಕ ಶ್ರೀ ಪವನ್ ಹಾಗೂ ಶ್ರೀ ವಿಠಲ್ ರವರು ಕಾರ್ಯಕ್ರಮ ನಡೆಸುವಲ್ಲಿ ಸಹಕರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಹಲವಾರು ಸ್ಥಳಗಳಿಂದ ಆಗಮಿಸಿದ್ದ ಸುಮಾರು 70 ನಾಗರಿಕರು ಭಾಗವಹಿಸಿದರು.












**ಜಾಗೃತಿ ಕಾರ್ಯಕ್ರಮದ ಸ್ಥಳ ನೌಕರರ ಸಂಘ ಸಭಾ ಭವನ, ಬೆಂಗಳೂರು ನಗರ, ಜಿಲ್ಲಾಧಿಕಾರಿಗಳ ಕಛೇರಿ.**

ಕಾರ್ಯಕ್ರಮದಲ್ಲಿ ನೆರೆದೆ ನಾಗರಿಕರಿಗೆ ಆನ್ ಲೈನ್‌ನಲ್ಲಿ ಸೇವೆ ಪಡೆಯುವುದು ಹೇಗೆ, ಯಾವ ಅಧಿಕಾರಿಯನ್ನು ಸಂಪರ್ಕಿಸಬೇಕು, ಕರೆಕೇಂದ್ರದ ಮಾಹಿತಿ, ವಿಳಂಬವಾಗಿ ಸೇವೆ ನಿರ್ವಹಿಸುತ್ತಿದ್ದರೆ ಏನು ಮಾಡಬೇಕು. ಎಂಬುದರ ಬಗ್ಗೆ ತಿಳಿಸಲಾಯಿತು, ಹಾಗೆಯೆ ಕಾರ್ಯಕ್ರಮದಲ್ಲಿ ನಾಗರಿಕರ ಹಲವಾರು ಕುಂದುಕೊರತೆ, ,ಪ್ರಶ್ನೆಗಳನ್ನು ಕಲೆಹಾಕಲಾಯಿತು, ಹಾಗೆಯೇ ಕೆಲವು ಸಲಹೆಗಳು ಕೂಡ ಈ ಸಂದರ್ಭದಲ್ಲಿ ದೊರೆತವು. ಸೇವೆಯನ್ನು ಪಡೆಯುವ ಸಂದರ್ಭದಲ್ಲಿ ಆದಂತಹ ತೊಡಕುಗಳನ್ನು ನಾಗರಿಕರು ತಿಳಿಸಿದರು ಅವುಗಳ ಪರಿ ಹೀಗಿವೆ.

1, ಪ್ರತಿ ಕುಟುಂಬ ಸರಕಾರಿ ಸೇವೆ ಪಡೆಯುವಲ್ಲಿ ಸರಾಸರಿ ರೂ.10,000/_ ಖರ್ಚು ಮಾಡುತ್ತಿದೆ

2. ಬಿಡಿಎ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸೇವಾನಿರ್ವಹಣ ವ್ಯವಸ್ಥೆ ಬಹಳ ಕೆಳಮಟ್ಟದಲ್ಲಿದೆ ಹಾಗೂ ನಾಗರಿಕರು ತಮ್ಮ ಹಕ್ಕುಗಳನ್ನು ಪಡೆಯುವಲ್ಲಿ ಬಲವರ್ಧರನ್ನಾಗಿ ಮಾಡುವ ಕಾರ್ಯಕ್ರಮಗಳನ್ನು ಆಯೋಜಿಸಬೇಕಿದೆ.

3. ಬೆಂಗಳೂರಿನ ಹಲವಾರು ನಾಗರಿಕರಿಗೆ ಸಕಾಲದ ಬಗ್ಗೆ ಸಂಪೂರ್ಣ ಅರಿವಿಲ್ಲ.

4. ನೆರೆಹೊರೆಯ ಜಿಲ್ಲೆಯ ನಾಗರಿಕರನ್ನು ಕೂಡಿಸಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಅವಶ್ಯಕವಿದೆ.

5. ಮಾಧ್ಯಮಗಳು ಇಂತಹ ಜನಪರ ಜಾಗೃತಿ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸದೆ ಇರುವುದು ವಿಷದನೀಯ. ದಿನಾಂಕ 25ನೇ ಫೆಬ್ರವರಿ 2014ರಂದು ಇದೇ ಟ್ರಸ್ಟ್‌ನ ಶ್ರೀ ಅಮೃತೇಶ್ವರ ರವರು ಆಸಿಸ್ಟಂಮ್ಸ್ ಇಂಡಿಯಾ ಪ್ರೈ ಲಿ – ಬೆಂಗಳೂರಿನಲ್ಲಿ ಸಕಾಲ ಕಾರ್ಯಕ್ರಮದ ಜಾಗೃತಿ ಕಾರ್ಯಕ್ರಮವನ್ನು ಮಂಡಳಿಯ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕ ಶ್ರೀ ಪವನ್ ನೆರವಿನೊಟ್ಟಿಗೆ ಏರ್ಪಡಿಸಿತ್ತು. ಕಾರ್ಯ ಕ್ರಮದ ದೃಶ್ಯ ಇಲ್ಲಿ ಲಗತ್ತಿಸಲಾಗಿದೆ.



ಈ ಕಾರ್ಯಕ್ರಮದಲ್ಲಿ ಬಹುರಾಷ್ಟ್ರೀಯ ಕಾರ್ಖಾನೆಯ ಸುಮಾರು 100 ಜನ ಕಾರ್ಮಿಕರು ಭಾಗವಹಿಸಿದ್ದರು. ನೆರೆದಿದ್ದ ಕಂಪನಿಯ ನೌಕರರು ಕುತುಹಲದಿಂದ ಸಕಾಲದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿದರು ಅದಕ್ಕೆ ಮಂಡಳಿ ತಂಡ ಹಾಗೂ ಟ್ರಸ್ಟ್ ಸುಮಾರು 2 ತಾಸು ಉತ್ತರಿಸಿತು. ಪ್ರಪ್ರಥಮ ಬಾರಿ ಸರಕಾರದಿಂದ ಈ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿತ್ತು.

ಈ ಕಾರ್ಯಕ್ರಮದಿಂದ ತಿಳಿದು ಬಂದ ವಿಷಯವೇನೆಂದರೆ.

1. ಉನ್ನತ ವ್ಯಾಸಂಗ ಮಾಡಿರುವ ಹಲವಾರು ಮಂದಿಗೂ ಸಕಾಲದ ಬಗ್ಗೆ ಹೆಚ್ಚಿನ ಅರಿವಿಲ್ಲ.

2. ಈ ರೀತಿಯ (ಕಂಪನಿಗಳಲ್ಲಿ ಜಾಗೃತಿ ಕಾರ್ಯಕ್ರಮ) ಕಾರ್ಯಕ್ರಮಗಳಿಂದ ಬಹಳ ಹೆಚ್ಚಿನ ನಾಗರಿಕರಲ್ಲಿ ಸಕಾಲದ ಬಗ್ಗೆ ಕ್ರಿಯಾತ್ಮಕವಾಗಿ ಅರಿವು ಮೂಡಿಸಬಹುದು.






ದಿನಾಂಕ 9ನೇ ಫೆಬ್ರವರಿ 2014ರಿಂದ 12ರವರೆಗೆ ತಹಶಿಲ್ ಕಛೇರಿ ಮೈದಾನದಲ್ಲಿ ನಡೆದ ಅಯ್ಯನಗುಡಿ ಜಾತ್ರೆಯಲ್ಲಿ ಸಕಾಲದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು, ಅವುಗಳ ದೃಶ್ಯ ಈ ಕೆಳಕಂಡಂತೆ ಇದೆ.







ರಾಯಚೂರಿನ ಸಹಾಯ ಕೇಂದ್ರ ನಾಗರಿಕರಿಗೆ ಸಕಾಲದ ಬಗ್ಗೆ ಅರಿವು / ಜಾಗೃತಿ ಮೂಡಿಸುತ್ತಿರುವ ದೃಶ್ಯ





ದಿನಾಂಕ 19/02/2014 ರಂದು ಚಾಮರಾಜನಗರ ತಾಲ್ಲೂಕು ಸಹಾಯ ಕೇಂದ್ರದ ನಿರ್ವಾಹಕರು ಶ್ರೀ ದಯಾನಂದ ಬೆಶಿರವರು, ಕುದೇರು ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಕಾಲ ಜಾಗೃತಿ ಕಾರ್ಯವನ್ನು ಅಯೋಜಿಸಿಕೊಂಡಿದ್ದರು. ಮದ್ಯಾಹ್ನ 2:15 ಗಂಟೆಯಿಂದ 3:10 ರವರೆಗೆ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತ ಭವನದಲ್ಲಿ **ಸಕಾಲ ಕಾಯಿದೆ** "ಯ ಬಗ್ಗೆ ಅರಿವು ಮೂಡಿಸುವ ಅನೇಕ ವಿಷಯಗಳನ್ನು ಸಭೆಗೆ ತಿಳಿಸಿದರು ಹಾಗೂ ಹಾಜರಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಸಕಾಲ ಖಾಯಿದೆಯ ಬಗ್ಗೆ ಮಾಹಿತಿ ನೀಡುವ ಕರ ಪತ್ರಗಳನ್ನು ವಿತರಿಸಲಾಯಿತು. ಈ ಸಭೆಯಲ್ಲಿ ಸುಮಾರು 150 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ದಿನಾಂಕ 22.2.2014ರಿಂದ 23.2.2014ರವರೆಗೆ ಗದಗ ಜಿಲ್ಲೆಯ ಲಕ್ಕುಂಡಿ ಗ್ರಾಮದಲ್ಲಿ ನಡೆದ ಲಕ್ಕುಂಡಿ ಉತ್ಸವದಲ್ಲಿ ಸಕಾಲ ಸಹಾಯ ಕೇಂದ್ರ ನಾಗರಿಕರ ಮಾಹತಿಗಾಗಿ ಸಕಾಲಕ್ಕೆ ಸಂಬಂಧಿತ ಕರಪತ್ರ ಹಾಗೂ ಸೇವೆಗಳ ವಿವರಗಳನ್ನೊಳಗೊಂಡ ಪೋಸ್ಟರನ್ನು ವಿತರಿಸಿದರು. ಅವುಗಳ ದೃಶ್ಯ





ಉತ್ತರ ಕನ್ನಡದ ಸಿರಸಿಯಲ್ಲಿ ಜೆ ಎಂ ಜೆ ಕಾಲೇಜಿನ ವಿದ್ಯಾರ್ಥಿಗಳ ಸಹಯೋಗದಲ್ಲಿ ಸಕಾಲ ಯೋಜನೆಯ ಬಗ್ಗೆ ಬೃಹತ್ ಜಾಥಾದ ಮೂಲಕ ಜನಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಅದರ ಒಂದು ದೃಶ್ಯ:




ದಿನಾಂಕ: 26.02.2014 ರಂದು ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸುಮಾರು 280 ವಿದ್ಯಾರ್ಥಿಗಳಿಗೆ ಸಕಾಲ ಸಹಾಯವಾಣಿ ಕೇಂದ್ರ ನಿರ್ವಾಹಕರಾದ ಉಷಾರಾಣಿರವರು ಸಕಾಲ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಒಂದು ಕಾರ್ಯಕ್ರಮದಲ್ಲಿ ಸುಮಾರು 100 ವಿದ್ಯಾರ್ಥಿಗಳು ಭಾಗವಹಿಸಿದ್ದರು, ಮತ್ತೊಂದು ಕಾರ್ಯಕ್ರಮದಲ್ಲಿ 180 ವಿದ್ಯಾರ್ಥಿಗಳು ಭಾಗವಹಿಸಿದ್ದರು, ಕಾರ್ಯಕ್ರಮದಲ್ಲಿ ಉಷಾರಾಣಿಯರವರು ಮಾತನಾಡಿ ಸಕಾಲದ ಬಗ್ಗೆ ಅನೇಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಿದರು.



ದಿನಾಂಕ: 24.02.2014ರಂದು ಕೊಳ್ಳೆಗಾಲ ತಾಲ್ಲೂಕು ಮಹದೇಶ್ವರ ಪದವಿ ಕಾಲೇಜು ಆವರಣದಲ್ಲಿ ಸಕಾಲ ಜಾಗೃತಿ ಕಾಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕೊಳ್ಳೇಗಾಲ ತಾಲ್ಲೂಕು ಕಛೇರಿ ಸಕಾಲ ಸಹಾಯ ಕೇಂದ್ರದ ನಿರ್ವಾಹಕರಾದ ಮಹೇಂದ್ರ ಕೆ ಹಾಗೂ ಯಳಂದೂರು ಸಕಾಲ ಸಹಾಯ ಕೇಂದ್ರ ನಿರ್ವಾಹಕರಾದ ವಿರ್ಶವನಾಥ್

ಎನ್ ರವರು ಸಕಾಲ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಸಕಾಲ ಸಂಯೋಜಕರು ಹಾಗೂ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರುಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಪ್ರಾಂಶುಪಾಲು, ಉಪನ್ಯಾಸಕರುಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸಹ ಭಾಗವಹಿಸಿದ್ದರು, ಕಾರ್ಯಕ್ರಮದಲ್ಲಿ ಕಾರ್ಯಕ್ರಮದಲ್ಲಿ ವಿಡಿಯೋ ಮೂಲಕ ಸಕಾಲದ ಬಗ್ಗೆ ಸಂಪೂರ್ಣವಾದ ಅರಿವನ್ನು ನೀಡಲಾಯಿತು, ಭಿತ್ತಿಪತ್ರ/ಕರಪತ್ರಗಳನ್ನು ಹಂಚಲಾಯಿತು. ಇದೇ ಸಂದರ್ಭದಲ್ಲಿ ಕೂಡಿದ್ದ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳ ಪ್ರತಿಜ್ಞೆಯನ್ನು ಮಾಡಿದರು






ದಿನಾಂಕ 26.2.2014 ರಂದು ಎಸ್ ಕೆ ಡಿ ಆರ್ ಡಿ ಪಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವು ಕೃಷಿ ಮೇಳವನ್ನು ಮೊಳಕಾಲ್ ಮೂರ್ ತಾಲ್ಲೂಕಿನಲ್ಲಿ ಏರ್ಪಡಿಸಿತ್ತು, ಈ ಸಂದರ್ಭದಲ್ಲಿ ಸಕಾಲ ಸಹಾಯ ಕೇಂದ್ರವು ಸಕಾಲದ ಬಗ್ಗೆ ಜಾಗೃತಿ ಮೂಡಿಸಲು ಸ್ಟಾಲನ್ನು ಸ್ಥಾಪಿಸಿದ್ದರು ಅದರ ದೃಶ್ಯ. ಇದೇ ಸಂದರ್ಭದಲ್ಲಿ ಸಕಾಲದ ಬಗ್ಗೆ ಕರಪತ್ರ ಹಾಗು ಅಧಿನಿಯಮದ ಪುಸ್ತಕಗಳನ್ನು ಹಂಚಲಾಯಿತು.










ಹಾವೇರಿಯಲ್ಲಿ ನಡೆದ ಪ್ರತಿಬಾ ಕಾರಂಜಿ ಕಾರ್ಯಕ್ರ ಮ ದಲ್ಲಿ ಪ್ರಶಸ್ತಿ ಪಡೆದ ಚಿತ್ರಗಳು




ನ್ಯಾಯ ದೇವತೆಯ ಕೊಡುಗೆ
ಸಕಾಲ ನಮಗಾಗಿ


ಸಕಾಲ






ಸಕಾಲ

# ಸಕಾಲ ಸಮೀಕ್ಷೆ – ಸಾಧನೆಯ ಗಾಥೆ

ಬೆಂಗಳೂರು 28ನೇ ಫೆಬ್ರವರಿ : ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಪ್ರಾರಂಭವಾಗಿ ಸುಮಾರು 20 ತಿಂಗಳು ಆಗಿವೆ. ಸೇವೆಗಳ ಗುಣಮಟ್ಟ, ಮೌಲ್ಯಮಾಪನ ಹಾಗೂ ನಾಗರಿಕರ ತೃಪ್ತಿಯನ್ನು ಪರೀಕ್ಷಿಸಲು ಕರ್ನಾಟಕ ಮಾಲ್ಯಮಾಪನ ಪ್ರಾಧಿಕಾರ ಮೂಲಕ ಸಮೀಕ್ಷೆಯನ್ನು ನಡೆಸಲಾಗಿತ್ತು. ಈ ಸಮೀಕ್ಷೆಯನ್ನು ಇಂಡಿಯನ್ ಮಾರ್ಕೆಟ್ ರಿಸರ್ಚ್ ಬ್ಯೂರೋ **(ಐ.ಎಂ.ಆರ್.ಬಿ)**. ಸಂಸ್ಥೆ ನಡೆಸಿತ್ತು.

ಈ ಅಧಿನಿಯಮ ಅಡಿಯಲ್ಲಿ 47 ಇಲಾಖೆ/ಸಂಸ್ಥೆಗಳ 478 ಸೇವೆಗಳನ್ನು 4.34 ಕೋಟಿ ನಾಗರಿಕರು ಸಮಯಬದ್ಧವಾಗಿ ಪಡೆದಿರುತ್ತಾರೆ ನಾಗರಿಕರ ಅತಿ ಹೆಚ್ಚಿನ ಬೇಡಿಕೆ ಇರುವ 17 ಇಲಾಖೆಗಳಲ್ಲಿನ 117 ಸಕಾಲ ಸೇವೆಗಳಗೆ ಸಂಬಂಧಿಸಿದಂತೆ ಬೆಂಗಳೂರು, ದಾವಣಗೆರೆ, ದಕ್ಷಿಣ ಕನ್ನಡ, ಗುಲ್ಬರ್ಗಾ, ಬೆಳಗಾಂ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಾಯೋಗಿಕ ಸಮೀಕ್ಷೆ ನಡೆಸಲಾಗಿದೆ. ಈ ಸಮೀಕ್ಷೆಯಲ್ಲಿ ಸುಮಾರು 10,050 (ಬೆಂಗಳೂರಿನಲ್ಲಿ 2,000 ಮತ್ತು ಉಳಿದ ಜಿಲ್ಲೆಗಳಲ್ಲಿ 1,600) ನಾಗರಿಕರನ್ನು ಸಂದರ್ಶಿಸಲಾಗಿದೆ.

**ಈ ಸಮೀಕ್ಷೆ ಕೆಲವೊಂದು ಕುತೂಹಲಕರ ಅಂಶಗಳನ್ನು ಹೊರಗೆಡವಿದೆ.**

ಸೇವೆ ಕೋರಿದ ನಾಗರಿಕರಲ್ಲಿ ಶೇಕಡ 99 ರಷ್ಟು ನಾಗರಿಕರು ಸಂತೃಪ್ತರಾಗಿರುತ್ತಾರೆ. ಕೇವಲ ಶೇಕಡ 1 ರಷ್ಟು ಅರ್ಜಿಗಳು ತಿರಸ್ಕೃತವಾಗಿವೆ. ಶೇಕಡ 76 ನಾಗರಿಕರು ಸಕಾಲ ಕೌಂಟರ್‌ನಲ್ಲಿ ಸೇವೆಗಳ ಬಗ್ಗೆ ಮಾಹಿತಿ, ಕಾರ್ಯವಿಧಾನ, ದಾಖಲೆಗಳ ಬಗ್ಗೆ ಮಾಹಿತಿ ಪಡೆದಿರುತ್ತಾರೆ.

ಶೇಕಡ 70 ಜನರು ಸಕಾಲ ಅಧಿನಿಯಮದ ಬಗ್ಗೆ ತಿಳಿದಿರುತ್ತಾರೆ. ಈ ಪೈಕಿ ಶೇಕಡ 63 ರಷ್ಟು ನಾಗರಿಕರು ಪರಿಚಯದವರಿಂದ ಮತ್ತು ಶೇಕಡ 40ರಷ್ಟು ನಾಗರಿಕರು ದಿನಪತ್ರಿಕೆಗಳಿಂದ ಹಾಗೂ ಶೇಕಡ 34ರಷ್ಟು ಜನರು ಕಛೇರಿ ಮುಂದೆ ಇರತಕ್ಕಂಥ ಸೂಚನಾ ಫಲಕಗಳಿಂದ ಮಾಹಿತಿ ಪಡೆದಿರುತ್ತಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾರ್ಮಿಕ ಇಲಾಖೆ, ಒಳಾಡಳಿತ ಇಲಾಖೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯ ಹೆಚ್ಚಿನ ಸೇವೆಗಳನ್ನು ನಾಗರಿಕರು ಸಮಯಬದ್ಧವಾಗಿ ಪಡೆದು ಸಂತೃಪ್ತರಾಗಿದ್ದಾರೆ.

ಕೇವಲ ಶೇಕಡ 18 ರಷ್ಟು ಸೇವೆಗಳನ್ನು ಮಹಿಳೆಯರು ನೇರವಾಗಿ ಪಡೆದಿರುತ್ತಾರೆ. ಒಟ್ಟಾರೆ ಸೇವೆ ಪಡೆದವರಲ್ಲಿ ಸುಮಾರು ಶೇಕಡ 50 ರಷ್ಟು ನಾಗರಿಕರು 25 ರಿಂದ 39 ವರ್ಷ ವಯೋಮಾನದವರಾಗಿರುತ್ತಾರೆ. ಬಡತನ ರೇಖೆಗಿಂತ ಕೆಳಗಿರುವ (ಬಿ.ಪಿ.ಎಲ್) ಶೇಕಡ 65 ರಷ್ಟು ಜನರು ಸಕಾಲ ಸೇವೆಗಳನ್ನು ಪಡೆದಿರುತ್ತಾರೆ. ಶೇಕಡ 41 ರಷ್ಟು ಜನ ಹಳ್ಳಿಗರು ಸಕಾಲ ಸೇವೆಗಳನ್ನು ಪಡೆದಿರುತ್ತಾರೆ.

**ಸೇವಾ ಪ್ರವೃತ್ತಿಯಲ್ಲಿ, ಪ್ರಗತಿ ತಂದ ಸಕಾಲ**

ಸಕಾಲ ಬರುವ ಮುಂಚೆ ನಾಗರಿಕ ಸೇವೆಗಳ ಕುರಿತು, ಶೇಕಡ 44 ಜನರು ಸಮಾಧಾನ ಹೊಂದಿದ್ದರೆ, ಸಕಾಲ ಬಂದ ನಂತರ ಈ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದೆ. ಇಂದು ಶೇಕಡ 97 ರಿಂದ 99 ರಷ್ಟು ಜನರು ಸಂತೃಪ್ತಿ ಹೊಂದಿರುತ್ತಾರೆ.

ಹಿಂದೆ ಶೇಕಡ 37 ರಷ್ಟು ನಾಗರಿಕರು ಸೇವೆಗಳಿಗಾಗಿ ಅರ್ಜಿಗಳನ್ನು ಸಲ್ಲಿಸುತ್ತಿದ್ದರೆ, ಈಗ ಈ ಸಂಖ್ಯೆ ಶೇಕಡ 95 ರಷ್ಟಾಗಿದೆ. ಅರ್ಜಿಗಳನ್ನು ಸಲ್ಲಿಸುವ ಪ್ರಕ್ರಿಯೆ ಈಗ ಸರಳವಾಗಿದೆ.

ಸಕಾಲ ಬರುವ ಮುನ್ನ 61% ರಷ್ಟು ಅರ್ಜಿದಾರರು ವಿಳಂಬಿತವಗಿ ಸೇವೆ ಪಡೆಯುತ್ತಿದ್ದರು, ಈಗ ಈ ಸಂಖ್ಯೆ ಕೇವಲ 17%ರಷ್ಟಾಗಿದೆ.

ಪ್ರಸ್ತುತ ಶೇಕಡ 99 ರಷ್ಟು ನಾಗರಿಕರು ಅಧಿಕಾರಿಗಳ/ಸಿಬ್ಬಂದಿಗಳ ಸೌಜನ್ಯತೆ ಹಾಗೂ ಮನೋಭಾವವನ್ನು ಮೆಚ್ಚಿರುತ್ತಾರೆ.

**ಮುನ್ನೋಟ**

ಶೇಕಡ 30 ರಷ್ಟು ನಾಗರಿಕರಿಗೆ ವಿಶೇಷವಾಗಿ ಜಿಲ್ಲಾಧಿಕಾರಿ ಹಾಗೂ ತಾಲ್ಲೂಕು ಕಛೇರಿಯಲ್ಲಿರುವ ಸಹಾಯ ಕೇಂದ್ರಗಳ ಬಗ್ಗೆ ಇನ್ನು ಹೆಚ್ಚಿನ ಜಾಗೃತಿ ಮೂಡಿಸಬೇಕಾಗಿದೆ. ಪ್ರಸ್ತುತ ಮೊಬೈಲ್ ಸಂಖ್ಯೆ ನೀಡುವುದನ್ನು ಕಡ್ಡಾಯ ಮಾಡಲಾಗಿದೆ. ಇದರಿಂದ ಅರ್ಜಿದಾರರು ಪುನ: ಕಛೇರಿಗೆ ಬರುವ ಅವಶ್ಯಕತೆ ಇರುವುದಿಲ್ಲ.

## ಪತ್ರಿಕಾ ವರದಿ

# 'ಸಕಾಲದಡಿ 69 ಸರ್ಕಾರಿ ಸೇವೆಗೆ ಶುಲ್ಕರಹಿತ ಆನ್‌ಲೈನ್ ಅರ್ಜಿ ಲಭ್ಯ'

ಗುಲ್ಬರ್ಗ: ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ2011ರಡಿ ಪ್ರಸ್ತುತ ವಿವಿಧ 42 ಇಲಾಖೆಗಳಿಂದ 447 ಸೇವೆಯನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತಿದ್ದು, ಇದರಲ್ಲಿ ಶುಲ್ಕರಹಿತ 69 ಸೇವೆಗಳನ್ನು ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಬೆಂಗಳೂರಿನ ಸಂಕಲ್ಪ ಸಂಸ್ಥೆಯ ಅಧ್ಯಕ್ಷ ಮತ್ತು ಸಾಫ್ಟ್‌ವೇರ್ ಎಂಜಿನಿಯರ್ ಸಂತೋಷ ನರಗುಂದ ಹೇಳಿದರು.

ಕರ್ನಾಟಕ ಸಕಾಲ ಮಿಷನ್, ರಾಷ್ಟ್ರೋತ್ಥಾನ ಸಂಕಲ್ಪ ಸಂಸ್ಥೆ ಮತ್ತು ಗುಲ್ಬರ್ಗ ಜಿಲ್ಲಾ ಆರ್.ಟಿ.ಐ ಕಾರ್ಯಕರ್ತರ ಜಿಲ್ಲಾ ಸಂಘದ ಸಂಯುಕ್ತಾಶ್ರಯದಲ್ಲಿ ಗುಲ್ಬರ್ಗದ ತಾಲೂಕಾ ಪಂಚಾಯತಿ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ2011 ಸಕಾಲ ಜನಜಾಗೃತಿ ಮತ್ತು ಸಂವಾದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಅರ್ಜಿ ಸಲ್ಲಿಸಿದ ನಂತರ ಕಡ್ಡಾಯವಾಗಿ 15 ಅಂಕಿಯುಳ್ಳ ಸ್ವೀಕೃತಿ ಸಂಖ್ಯೆಯನ್ನು ಪಡೆಯಬೇಕು ಎಂದು ಸಲಹೆ ನೀಡಿದರು. ಸಕಾಲ ಮಿಶನ್ ಜಿಲ್ಲಾ ಐ.ಟಿ ಸಮಾಲೋಚಕ ವಿದ್ಯಾ ದೇವಾಪೂರ ಅವರು ಕಂಪ್ಯೂಟರ್ ಮೂಲಕ ಸಕಾಲ ಕಾಯ್ದೆ ಮತ್ತು ಆನ್‌ಲೈನ್ ಅರ್ಜಿ ಸಲ್ಲಿಸುವ ಕುರಿತು ವಿವರ ನೀಡಿದರು. ಗುಲ್ಬರ್ಗ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕಾಧಿಕಾರಿ ವಿಜೇಂದ್ರ ಭಾಗವಹಿಸಿದ್ದರು. ಗುಲ್ಬರ್ಗ ಗ್ರೇಡ್2 ತಹಶೀಲ್ದಾರ ಪ್ರಕಾಶ,ಜಿಲ್ಲಾ ಆರ್.ಟಿ.ಐ ಕಾರ್ಯಕರ್ತರ ಸಂಘದ ಅಧ್ಯಕ್ಷ ಸಿದ್ಧರಾಮಯ್ಯ ಹಿರೇಮಠ ವಂದಿಸಿದರು.

Praja Vani, Gulbarga, 10-Feb-2014

ವ್ಯಾ ಪಾ ರಿ ಸ್ನೇ ಹಿ ನೀ ತಿ

Udayavani Tue 04.02.2014

# ಆನ್‌ಲೈನ್‌ನಲ್ಲೇ ಟ್ರೇಡ್ ಲೈಸೆನ್ಸ್ ಪಡೆಯಿರಿ

■ ವರ್ತಕರು, ಉದ್ಯಮಿಗಳ ಅಲೆದಾಟ ತಪ್ಪಿಸಲು ಬಿಬಿಎಂಪಿ ಹೊಸ ನೀತಿ ■ ಕೇವಲ 30 ದಿನದಲ್ಲಿ ಪರವಾನಗಿ ಪತ್ರ ಲಭ್ಯ

**ಬೆಂಗಳೂರು:** ವರ್ತಕರು, ಉದ್ಯಮಿಗಳು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಬಿಬಿಎಂಪಿಯು 'ಆನ್ ಲೈನ್ ಟ್ರೇಡ್ ಲೈಸೆನ್ಸ್ ವ್ಯವಸ್ಥೆ' ಜಾರಿಗೆ ತಂದಿದೆ.

ಅಂಗಡಿ, ಉತ್ಪಾದನಾ ಘಟಕ, ಕಾರ್ಖಾನೆಯಂತಹ ಯಾವುದೇ ವಾಣಿಜ್ಯ ಉದ್ದಿಮೆ ಹೊಂದಿರುವವರು ಸೂಚಿತ ದಾಖಲೆಗಳೊಂದಿಗೆ ನೇರವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿ ಬಿಬಿಎಂಪಿ ಸೂಚಿಸಿದ ಶುಲ್ಕವನ್ನು ಕಾರ್ಡ್ ಮೂಲಕ ಪಾವತಿ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ.

ಇದರಿಂದ ವಾಣಿಜ್ಯ ಪರವಾನಗಿಗೆ ಪಾಲಿಕೆ ಕಚೇರಿಗಳಿಗೆ ಅಲೆಯುವುದು ತಪ್ಪಲಿದ್ದು ಈ ವೇಳೆ ಸ್ವೀಕೃತಿ ಪತ್ರ ದೊರೆತ 30 ದಿನಗಳಲ್ಲಿ ವಾಣಿಜ್ಯ ಪರವಾನಗಿ ಅರ್ಜಿದಾರರ ಕೈ ತಲುಪಲಿದೆ. ಜತೆಗೆ, ಪ್ರತಿ ವರ್ಷ ಆನ್‌ಲೈನ್ ಮೂಲಕವೇ ನವೀಕರಣಕ್ಕೆ ಅರ್ಜಿ ಸಲ್ಲಿಸಬಹುದಾಗಿದ್ದು 15 ದಿನಗಳಲ್ಲಿ ಪರವಾನಗಿ ನವೀಕರಣ ಮಾಡಿಕೊಡಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದ್ದಾರೆ.

www.bbmp.gov.in ಗೆ ಲಾಗಿನ್ ಆಗಿ ಸಿಟಿಜನ್ ಸರ್ವಿಸಸ್‌ನಲ್ಲಿನ 'ಟ್ರೇಡ್ ಲೈಸೆನ್ಸ್ ರಿನೀವಲ್' ಕ್ಲಿಕ್ ಮಾಡುವ ಮೂಲಕ ಆನ್‌ಲೈನ್ ಟ್ರೇಡ್ ಲೈಸೆನ್ಸ್ ಹಾಗೂ ನವೀಕರಣ ಕುರಿತು ಸಂಪೂರ್ಣ ಮಾಹಿತಿ ಪಡೆಯಬಹುದು.

**ಪಾಲಿಕೆಸದಸ್ಯರಿಗೂ ಆ್ಯಪ್:** ಪಾಲಿಕೆಸದಸ್ಯರಿಗಾಗಿಯೂ ಆ್ಯಪ್ ಸಿದ್ಧಪಡಿಸಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಪರವಾನಗಿ ಪಡೆಯದಿರುವ ಅಂಗಡಿಗಳ ಚಿತ್ರ ತೆಗೆದು ಮೊಬೈಲ್ ಅಪ್ಲಿಕೇಷನ್ ಮೂಲಕ ಅಪ್‌ಲೋಡ್ ಮಾಡಬಹುದು. ಅಪ್‌ಲೋಡ್ ಮಾಡಿದ ಫೋಟೋ ನೇರವಾಗಿ ಆರೋಗ್ಯ ಇಲಾಖೆಗಳಿಗೆ ತಲುಪಲಿದ್ದು ಸಂಬಂಧಪಟ್ಟ ಪ್ರದೇಶದ ಆರೋಗ್ಯಾಧಿಕಾರಿಗಳಿಗೆ ಸಂದೇಶ ರವಾನೆಯಾಗುತ್ತದೆ. ಇದರಿಂದ ವಾಣಿಜ್ಯ ಪರವಾನಗಿ ಪರಿಶೀಲನೆ ಸುಲಭವಾಗಲಿದೆ ಎನ್ನುತ್ತಾರೆ ಆರೋಗ್ಯ ಸ್ಥಾಯಿ ಸಮಿತಿ ಸದಸ್ಯ ವಿ. ವಾಗೀಶ್.



ನಗರದ ಮಲ್ಲೇಶ್ವರ ಐಪಿಪಿ ಕಟ್ಟಡದಲ್ಲಿ ಸೋಮವಾರ 'ವಾಣಿಜ್ಯ ಪರವಾನಗಿ ವಿತರಣೆ' ಆನ್‌ಲೈನ್ ವ್ಯವಸ್ಥೆಗೆ ಮೇಯರ್ ಕಟ್ಟೆ ಸತ್ಯನಾರಾಯಣ ಚಾಲನೆ ನೀಡಿದರು.

### ■ ಆನ್‌ಲೈನ್ ವ್ಯವಸ್ಥೆ ಹೇಗೆ?

Www.bbmp.gov.in ಗೆ ಲಾಗಿನ್ ಆಗಿ ಸಿಟಿಜನ್ ಸರ್ವಿಸಸ್‌ನಲ್ಲಿನ 'ಟ್ರೇಡ್ ಲೈಸೆನ್ಸ್ ರಿನೀವಲ್' ಕ್ಲಿಕ್ ಮಾಡುವ ಮೂಲಕ ಆನ್‌ಲೈನ್ ಟ್ರೇಡ್ ಲೈಸೆನ್ಸ್ ಹಾಗೂ ನವೀಕರಣದ ಸೂಚಿತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು. ದಾಖಲೆಗಳನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿ ಬಿಬಿಎಂಪಿ ಸೂಚಿಸಿದ ಶುಲ್ಕವನ್ನು ಕಾರ್ಡ್ ಮೂಲಕ ಪಾವತಿಸಬೇಕು.

### ■ ಉತ್ತಮ ನೌಕರ ಪ್ರಶಸ್ತಿ

ಆನ್‌ಲೈನ್ ಮೂಲಕ ಟ್ರೇಡ್ ಲೈಸೆನ್ಸ್ ವಿತರಣೆ ವ್ಯವಸ್ಥೆ ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯಲ್ಲಿ ಯಾವ ವಲಯದಲ್ಲಿ ಅತಿ ಹೆಚ್ಚು ವಾಣಿಜ್ಯ ಪರವಾನಗಿ ವಿತರಣೆ ಮಾಡಲಾಗುತ್ತದೆಯೋ. ಅಂತಹ ಅಧಿಕಾರಿಗೆ ಕೆಂಪೇಗೌಡ ದಿನಾಚರಣೆಯಂದು 'ಉತ್ತಮ ನೌಕರ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

● ಲಕ್ಷ್ಮೀನಾರಾಯಣ್, ಆಯುಕ್ತರು

## ಆರೋಗ್ಯ ವಿಭಾಗದ ಅಧಿಕಾರಿಗಳಿಗೆ ಮೇಯರ್ ಸತ್ಯನಾರಾಯಣ ತರಾಟೆ

**ಬೆಂಗಳೂರು:** ಆರ್ಥಿಕ ಸಂಕಷ್ಟ ಎದುರಾಗಿದ್ದರೂ ಪಾಲಿಕೆಗೆ ಆದಾಯ ತರಬಲ್ಲ ವಾಣಿಜ್ಯ ಪರವಾನಗಿ ಕುರಿತು ನಿರ್ಲಕ್ಷ್ಯ ವಹಿಸಿರುವ ಆರೋಗ್ಯ ವಿಭಾಗದ ಅಧಿಕಾರಿಗಳ ವಿರುದ್ಧ ಮೇಯರ್ ಕಟ್ಟೆ ಸತ್ಯನಾರಾಯಣ ಕಿಡಿ ಕಾರಿದರು.

ಸೋಮವಾರ ನಗರದ ಮಲ್ಲೇಶ್ವರ ಐಪಿಪಿ ಕಟ್ಟಡದಲ್ಲಿ 'ವಾಣಿಜ್ಯ ಪರವಾನಗಿ ವಿತರಣೆ' ಆನ್‌ಲೈನ್ ವ್ಯವಸ್ಥೆಗೆ ಚಾಲನೆ ನೀಡಿದ ಅವರು, ಪಾಲಿಕೆಗೆ ಆದಾಯ ತಂದುಕೊಡುವ ಮೂಲಗಳಲ್ಲಿ ವಾಣಿಜ್ಯ ಪರವಾನಗಿ ಹಾಗೂ ಆಸ್ತಿ ತೆರಿಗೆ ಬಹುಮುಖ್ಯವಾದವು. ತೆರಿಗೆ ಇಲಾಖೆಯ ವ್ಯಾಟ್‌ನಡಿ ನಗರದಲ್ಲಿನ ಸುಮಾರು 5 ಲಕ್ಷ ವಾಣಿಜ್ಯ ವಹಿವಾಟುದಾರರು ನೋಂದಾಯಿಸಿಕೊಂಡಿದ್ದಾರೆ. ಅವರಲ್ಲಿ ಶೇ.90 ರಷ್ಟು ಮಂದಿ ಬಿಬಿಎಂಪಿಯ ವಾಣಿಜ್ಯ ಪರವಾನಗಿ ಇಲ್ಲದೇ ವ್ಯಾಪಾರ ಮಾಡುತ್ತಿದ್ದಾರೆ. ಬಿಬಿಎಂಪಿಯಿಂದ ಕೇವಲ 50 ಸಾವಿರ ಮಂದಿ ಮಾತ್ರ ಪರವಾನಗಿ ಪಡೆದಿದ್ದಾರೆ. ಹೀಗಿದ್ದರೂ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ವ್ಯಾಪಾರಿಗಳಿಗೆ ಬಿಬಿಎಂಪಿ ಎಂದರೆ ತಾತ್ಸಾರ ಮನೋಭಾವನೆ ಬಂದಿದೆ. ಇದಕ್ಕೆ ಅಧಿಕಾರಿಗಳೇ ನೇರ ಕಾರಣ. ಪ್ರತಿ ತಿಂಗಳು ಸಂಬಳ ಮಾತ್ರ ಬೇಕು. ಆದರೆ, ಪಾಲಿಕೆಗೆ ಸಂಪನ್ಮೂಲ ಸಂಗ್ರಹಿಸುವುದು ನಿಮ್ಮ ಜವಾಬ್ದಾರಿ ಎಂಬುದು ನಿಮಗೆ ಗೊತ್ತಿಲ್ಲವೆ?, ಬೆಳಗ್ಗೆಯಿಂದ ಸಂಜೆವರೆಗೆ ಕಚೇರಿಯಲ್ಲಿ ಕಾಲ ಕಳೆದು ಹೊಗುತ್ತಿದ್ದೀರಾ? ಪಾಲಿಕೆಗೆ ನಿಮ್ಮ ಸೇವೆ ಶೂನ್ಯ. ವಲಯ ಜಂಟಿ ಆಯುಕ್ತರು ಸಭೆಯಲ್ಲಿ ಹೇಳಿದ್ದು ಕೇಳಿ ಕಾಫಿ ಕುಡಿದು ಹೋಗಲು ಬರುತ್ತೀರಾ? ಇಲ್ಲಾ ಕೆಲಸ ಮಾಡಲು ಬರುತ್ತೀರಾ ಎಂದು ತರಾಟೆಗೆ ತೆಗೆದುಕೊಂಡರು.

**ಹೊರಗುತ್ತಿಗೆಗೆ ನೀಡಲಾಗುವುದು:** ಹಿರಿಯ ಆರೋಗ್ಯ ಅಧಿಕಾರಿಗಳು ಯಾವ ಜವಾಬ್ದಾರಿಯನ್ನೂ ನಿರ್ವಹಿಸುತ್ತಿಲ್ಲ, ನಿತ್ಯ 25 ಅಂಗಡಿಗಳಿಗೆ ಭೇಟಿ ನೀಡಿ ವಾಣಿಜ್ಯ ಪರವಾನಗಿ ಹೊಂದದ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳಬಹುದಿತ್ತು. ವರ್ಷಗಳೇ ಕಳೆದರೂ ಇದುವರೆಗೂ ಯಾವೊಬ್ಬ ಅಧಿಕಾರಿಯೂ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿಲ್ಲ, ಸಹಾಯಕ ಆರೋಗ್ಯ ಅಧಿಕಾರಿಗಳು ಉದ್ದಿಮೆ ಅಥವಾ ಅಂಗಡಿಗಳ ಮುಂದೆ ಹೋಗುತ್ತಿಲ್ಲ, ಆನ್‌ಲೈನ್ ವ್ಯವಸ್ಥೆ ಮೂಲಕವೂ ವಾಣಿಜ್ಯ ಪರವಾನಗಿ ವಿತರಣೆ ವಿಳಂಬ ಮಾಡಿದರೆ ಹೊರ ಗುತ್ತಿಗೆಗೆ ನೀಡಲಾಗುವುದು ಎಂದು ಎಚ್ಚರಿಸಿದರು.

ಆಯುಕ್ತ ಎಂ. ಲಕ್ಷ್ಮೀನಾರಾಯಣ್, ಪಾಲಿಕೆ ಸದಸ್ಯರು ಆದಾಯದ ಮೂಲ ಹುಡುಕಿ ಕೊಡುತ್ತಿದ್ದಾರೆ. ಈಗಾಗಲೇ ರಸ್ತೆ ಇತಿಹಾಸ, ಓಎಫ್‌ಸಿ, ಪಿಐಡಿ ಮೂಲಕ ಆಸ್ತಿ ಗುರುತಿಸುವಿಕೆಯಂತಹ ಉತ್ತಮ ಸಲಹೆ ನೀಡಿದ್ದಾರೆ. ಈ ಕುರಿತು ಅಧಿಕಾರಿಗಳೇ ಸೂಕ್ತವಾಗಿ ಪ್ರತಿಕ್ರಿಯೆ ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸದರು.

ಉಪಮೇಯರ್ ಆರ್. ಇಂದಿರಾ, ಆರೋಗ್ಯಸ್ಥಾಯಿ ಸಮಿತಿ ಅಧ್ಯಕ್ಷೆ ಶಶಿರೇಖಾ ಜಯರಾಮ್, ಆಡಳಿತ ಪಕ್ಷದ ನಾಯಕ ಅಶ್ವತ್ಥ ನಾರಾಯಣಗೌಡ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಎ.ಎಚ್. ಬಸವರಾಜ್, ರೇಖಾ ಕದೀರೇಶ್, ಉಮೇಶ್ ಶೆಟ್ಟಿ ಮೊದಲಾದವರು ಇದ್ದರು.

ಆಶಾವಾದ ಮೂಡಿದೆ ಕರ್ನಾಟಕದ ಮುಗಿಲಿನಲಿ ಮುಂದು
ಉತ್ತಮ ಆಡಳಿತ ಗರಿ ಕೆದರಿದೆ ಕರ್ನಾಟಕದಲ್ಲಿ ಇಂದು
ಸಕಾಲ ಸೇವೆಗಳು ನಾಗರಿಕರಿಗೆಲ್ಲಾ ಪ್ರೀತಿಯ ಆಸರೆಯಾಗಲಿ
ಸಿಬ್ಬಂದಿ ಮನೋಭಾವನೆಯಲ್ಲಿ ಬದಲಾವಣೆ ಸಂತಸ ತರಲಿ
ಆನ್ ಲೈನ್ ಇರಲಿ, ನೇರ ಸೇವೆಗಳಾಗಲಿ
ನಾಗರಿಕನು ನಮ್ಮವನೆಂಬ ಅನುರಾಗವಿರಲಿ
ಸಕಾಲವೀಗ ಮೇಲ್ದರ್ಜೆಗೆ ಸಾಗಿದೆ ಬೇಗ
ಇಲಾಖೆಗಳಲ್ಲಿ ಸೇವೆಗಳೆಲ್ಲಾ ಸಕಾಲದಲ್ಲೇ ಸಾಗ
ಕರ್ನಾಟಕವೀಗ ಉಳಿದಿಲ್ಲ ಬರಿ ಪ್ರವಾಸೋದ್ಯಮ ತಾಣ
ಉತ್ತಮ ಆಡಳಿತದ ತವರೂರು ಆಗುವ ಕ್ಷಣ
ದೇಶ ವಿದೇಶಗಳಿಂದ ಅಧಿಕಾರಿಗಳ ಆಗಮನ
ಸಕಾಲ ಸೇವೆಗಳ ಅನುಷ್ಟಾನದ ಗುಟ್ಟಿನ ಮನನ

# ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ - 2011




## ನಿಮ್ಮ ಅಭಿಲಾಷೆಯನ್ನು ಇಂದೇ ಈಡೇರಿಸಿಕೊಳ್ಳಿ ನಮ್ಮ ಸಾಂಗತ್ಯದಲ್ಲಿ

## ನಗರಾಭಿವೃದ್ಧಿ ಇಲಾಖೆ

| ಕ್ರ.ಸಂ. | ಇಲಾಖೆಯ ಮುಖ್ಯ ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತುಮಾಡಿದ ಕಾಲ (ಕೆಲಸದ ದಿನಗಳು) |
|---|---|---|---|
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | | |
| 1 | ಜನನ/ಮರಣ ಪ್ರಮಾಣ ಪತ್ರ | ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ, ಉಪ ಆರೋಗ್ಯ ಅಧಿಕಾರಿ ಮತ್ತು ದೊಡ್ಡ ಆಸ್ಪತ್ರೆಗಳ ಸೂಪರಿಂಟೆಂಡೆಂಟ್ | 03 ರಿಂದ 07 |
| 2 | ಪ್ರವರ್ಗದ ವಾಣಿಜ್ಯ ಲೈಸೆನ್ಸ್ ನೀಡುವುದು | ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ, ಉಪ ಆರೋಗ್ಯ ಅಧಿಕಾರಿ | 30 |
| 3 | ಖಾತಾ ಉದ್ಧೃತ / ಪ್ರಮಾಣ ಪತ್ರ | ಉಪ ಕಂದಾಯ ಅಧಿಕಾರಿ | 03 ರಿಂದ 07 |
| 4 | 2400ಚ.ಅ. ಅಳತೆಯವರೆಗಿನ ನಿವೇಶನಗಳಲ್ಲಿ ಕಟ್ಟಡ ಯೋಜನೆಯ ಮಂಜೂರಾತಿ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ | 30 |
| ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | | | |
| 5 | ನೀರು ಸರಬರಾಜು ಮತ್ತು ಒಳಚರಂಡಿಯ ಹೊಸ ಸಂಪರ್ಕಕ್ಕೆ ಅನುಮತಿ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ | 15 |

ಇಂದು... ನಾಳೆ... ಇನ್ನಿಲ್ಲ- ಹೇಳಿದ ಸಮಯ (ದಿನ) ತಪ್ಪೊಲ್ಲ

ಮಾಹಿತಿಗೆ ಹಾಗೂ ದೂರುಗಳಿಗೆ ಸಂಪರ್ಕಿಸಿ:

**ಸಕಾಲಕ್ಕೆ ಸೇವೆ ನೀಡದಿದ್ದರೆ !!**
ಸರ್ಕಾರಿ ನೌಕರರು ನಾಗರಿಕರಿಗೆ ರೂ.20/- ರಿಂದ ರೂ.500/-ಗಳವರೆಗೆ ಪರಿಹಾರ ಶುಲ್ಕವನ್ನು ತನ್ನ ಸಂಬಳದಿಂದ ಭರಿಸುವುದು

**080 44554455**
sakala@nic.in
www.sakala.kar.nic.in

"15 ಸಂಖ್ಯೆಯುಳ್ಳ **ಸ್ವೀಕೃತಿ ರಶೀದಿಯನ್ನು** ಕೇಳಿ ಪಡೆಯುವುದು, ಅದು ನಿಮ್ಮ ಹಕ್ಕು"

**2014 ಮಾರ್ಚ್**

| ಭಾ | ಸೋ | ಮಂ | ಬ | ಗು | ಶು | ಶ | ಭಾ | ಸೋ | ಮಂ | ಬ | ಗು | ಶು | ಶ | ಭಾ | ಸೋ | ಮಂ | ಬ | ಗು | ಶು | ಶ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | | | | | |

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು